## ಶ್ರೀ ಶ್ರೀಪಾದರಾಜ ಆರಾಧನಾ ಮಹೋತ್ಸವದ ಕಾರ್ಯಕ್ರಮಗಳು

ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆಯ ವತಿಯಿಂದ ವಿಚಾರಸಂಕಿರಣ

**24.06.2010 ಪೂರ್ವಾರಾಧನೆ**

| | |
|---|---|
| ಪ್ರತಿ ದಿನ ವಿಚಾರಸಂಕಿರಣ | ಬೆಳಗ್ಗೆ – 9 ರಿಂದ 10.30 ಪ್ರಥಮ ಅಧಿವೇಶನ |
| | 10.30 ರಿಂದ 12 ದ್ವಿತೀಯ ಅಧಿವೇಶನ |
| ಉಪನ್ಯಾಸ | ಸಂಜೆ – 5 ರಿಂದ 6 ಕ್ಕೆ |
| | ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು |

**ವಿಷಯ : ಭಾಗವತ ಧರ್ಮಗಳಲ್ಲಿ ಭಕ್ತಿಯ ಮಹತ್ವ**

ಅಧ್ಯಕ್ಷರು : ವಿದ್ವಾನ್ ವಿ.ಆರ್.ಪಂಚಮುಖಿ

ದಾಸ ಸಾಹಿತ್ಯ ದೃಷ್ಟಿ – ವಿದ್ವಾನ್ ರಾಮ ವಿಠಲಾಚಾರ್ಯ
ವೈಜ್ಞಾನಿಕ ದೃಷ್ಟಿ – ವಿದ್ವಾನ್ ಸತ್ಯನಾರಾಯಣಾಚಾರ್ಯ
ಆಧ್ಯಾತ್ಮ ದೃಷ್ಟಿ – ವಿದ್ವಾನ್ ಮೋಹನಾಚಾರ್ಯ

**ವಿಷಯ : ಭವವೆಂಬ ಅಡವಿಯಲ್ಲಿ ಎಂಬ ಉಗಾಭೋಗ**

ಅಧ್ಯಕ್ಷರು : ವಿದ್ವಾನ್ ಪ್ರಭಂಜನಾಚಾರ್ಯ

ದಾಸ ಸಾಹಿತ್ಯ ದೃಷ್ಟಿ – ವಿದ್ವಾನ್ ಕಲ್ಲಾಪುರ ಪವಮಾನಾಚಾರ್ಯ
ವೈಜ್ಞಾನಿಕ ದೃಷ್ಟಿ – ವಿದ್ವಾನ್ ವಿಜಯೀಂದ್ರಾಚಾರ್ಯ
ಆಧ್ಯಾತ್ಮ ದೃಷ್ಟಿ – ಡಾ|| ಕೊರ್ಲಹಳ್ಳಿ ವೆಂಕಟೇಶಾಚಾರ್ಯ

ವಿಶೇಷ ಉಪನ್ಯಾಸ: ವಿದ್ವಾನ್ ಹಯವದನ ಪುರಾಣಿಕ್
ವಿಷಯ : ಶ್ರೀಪಾದರಾಜ ವಿರಚಿತ **ಅಧ್ಯಾತ್ಮ ಮಾಲ**

**25.06.2010 ಮಧ್ಯಾರಾಧನೆ**

**ವಿಷಯ : ಭಾಗವತ ಧರ್ಮಗಳಲ್ಲಿ ಏಕಾದಶಿ ಆಚರಣೆಯ ಮಹತ್ವ.**

ಅಧ್ಯಕ್ಷರು : ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ

ದಾಸ ಸಾಹಿತ್ಯ ದೃಷ್ಟಿ – ವಿದ್ವಾನ್ ಬೇಡಾ ವೇದವ್ಯಾಸ ಚಾರ್ಯ
ವೈಜ್ಞಾನಿಕ ದೃಷ್ಟಿ – ವಿದ್ವಾನ್ ತಿರುಮಲ ಕುಲಕರ್ಣಿ
ಆಧ್ಯಾತ್ಮ ದೃಷ್ಟಿ – ಶ್ರೀ ಎ. ಆರ್. ಪಂಚಮುಖಿ

**ವಿಷಯ : ಹರಿಭಕುತನಾದವ ಅರಿದು ಪಾಪವ ಮಾಡುವುದಿಲ್ಲ.**

ಅಧ್ಯಕ್ಷರು : ವಿದ್ವಾನ್ ಹರಿದಾಸ ಭಟ್

ದಾಸ ಸಾಹಿತ್ಯ ದೃಷ್ಟಿ – ವಿದ್ವಾನ್ ಪುಷ್ಕರಪ್ರಸಾದ್
ವೈಜ್ಞಾನಿಕ ದೃಷ್ಟಿ – ವಿದ್ವಾನ್ ರಂಗನಾಥ ಕಟ್ಟಿ
ಆಧ್ಯಾತ್ಮ ದೃಷ್ಟಿ – ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯ

ವಿಶೇಷ ಉಪನ್ಯಾಸ: ವಿದ್ವಾನ್ ಆನಂದತೀರ್ಥಾಚಾರ್ಯ ನಾಗಸಂಪಿಗೆಯವರಿಂದ
ವಿಷಯ : ಶ್ರೀಪಾದರಾಜ ವಿರಚಿತ **ವಾಗ್ವಜ್ರ**



# ರಂಗವಿಠಲ

ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ,
ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

**ವಿಕೃತಿ, ಜೇಷ್ಠ**

**ಜೂನ್** 2010
**June-2010**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ನಂತರ ಇದು
**(ಸಂಪುಟ 6 ಸಂಚಿಕೆ 10)**
ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ.)

Editor :
**H.B. Lakshminarayana**
No. 58, Raghavendra Colony, Chamarajpet,
Bangalore-560 018 Phone : (080) 26914637, 26914571

Publisher :
**Sri Sripadaraja Mutt**
Mulbagal, Kolar
Phone: 08159-290839

Printer :
**Sri Sripadaraja Printers & Publisher**
No. 58, Raghavendra Colony, Chamarajpet,
Bangalore-560 018. Phone : (080) 26914637

**Address: Postal / Courier / Email**

**Sri Sripadaraja Mutt**
No. 58, Raghavendra Colony, Chamarajpet,
Bangalore-560 018. Phone : (080) 26914637, 26914571
Webmail: Sripadarajamutt.org
Email: rangavittala.sripada@gmail.com

## ಸಂದೇಶ



**ಬಿಡಿ ಬಿಡಿ ಸಂದೇಹವನು ಪೊಡವಿ ಮನುಜರೆಲ್ಲ**
**ಒಡೆಯನೊಬ್ಬನೆ ಜಗಕೆ ರಂಗವಿಠಲ**

ಹರಿಯೇ ಸರ್ವೋತ್ತಮ, ಹರಿಯೇ ಸರ್ವೇಶ್ವರ ಎಂದು ಶ್ರೀಪಾದರಾಜರು ನೀಡಿದ ಉಪಸನಾ ಮಾರ್ಗವನ್ನು ಹರಿದಾಸರುಗಳು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಹರಿಯ ಕರುಣದಿಂದ ಒದಗಿ ಬಂದ ಎಲ್ಲ ಭಾಗ್ಯಗಳನ್ನೂ ಹರಿಸಮರ್ಪಣೆ ಮಾಡಿ ಬದುಕಬೇಕೆಂಬ ಆಶಯವನ್ನು ರಾಜರ ರಚನೆಗಳಲ್ಲಿ ಕಾಣುತ್ತೇವೆ.

ವೈವಿಧ್ಯಮಯವಾಗಿ ರೂಪುಗೊಂಡಿರುವ ಶ್ರೀಪಾದರಾಜರ ಕೃತಿಗಳ ಅಧ್ಯಯನದಲ್ಲಿ ಹೊಸದೇ ಆದ ಅನುಭವಲೋಕವೊಂದನ್ನು ಪ್ರವೇಶಿಸಿದಂತಾಗುತ್ತದೆ.

**ನಾನು-ನನ್ನದು ಎಂಬುದನ್ನು ಬಿಟ್ಟು ಎಲ್ಲವೂ ಆ ದೇವನದೇ** ಎಂಬ ಭಾವವು ಶ್ರೀಪಾದರಾಜರನ್ನು ಮೊದಲ್ಗೊಂಡು ಎಲ್ಲ ಹರಿದಾಸರೂ ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ವಿಶ್ವದ ವಸ್ತುಗಳೆಲ್ಲವೂ ಭಗವಂತನ ಪೂಜೆಗೇ ಮೀಸಲು. ಈಶನ ಪೂಜೆಯೇ ದಾಸರಿತ್ತ ಮಾರ್ಗ. ಸರ್ವತ್ರ ವ್ಯಾಪ್ತನಾದ ರಂಗನನ್ನು ಕಂಡು ಸಂಭ್ರಮಿಸಿದ ಶ್ರೀಪಾದರಾಜರ ಸರ್ವಸಮರ್ಪಣಾ ಭಾವದ ಸಿರಿಯಲ್ಲಿ ದಾಸರುಗಳು ಸಂಭ್ರಮಿಸಿದ್ದಾರೆ.

ಇಂಥ ಜಿಜ್ಞಾಸೆ ಹಾಗೂ ಅಧ್ಯಯನ ಪರಿಶ್ರಮದಲ್ಲಿ ಲೇಖಕ ವೃಂದ ಶ್ರೀಪಾದರಾಜರ ಕೃತಿಯ ವಿಶ್ಲೇಷಣ ವಿಹಾರದಲ್ಲಿ ತೊಡಗಿಸಿಕೊಂಡಿರುವುದು ಸ್ವಾಗತಾರ್ಹ.

ಶ್ರೀಪಾದರಾಜರ ಕೃತಿ ಚಿಂತನೆಯಲ್ಲಿ ಶೃಂಗರಿಸಿದ **ರಂಗವಿಠಲ** ಎಲ್ಲ ಸಜ್ಜನ ಬಂಧುಗಳಿಗೂ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತಾ ಮಾಡುವ.

**ನಾರಾಯಣಸ್ಮರಣೆಗಳು**

**ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು**



# ರಂಗವಿಠಲ

## ಮಾಸಪತ್ರಿಕೆ ಚಂದಾವಿವರ (Subscription)

ಮಾಸಪತ್ರಿಕೆ ಚಂದಾವಿವರ (Subscription)

| | |
|---|---|
| ದಶವಾರ್ಷಿಕ ಚಂದಾ (Ten Years) | 900-00 |
| ಪಂಚವಾರ್ಷಿಕ ಚಂದಾ (Five Years) | 450-00 |
| ತ್ರೈವಾರ್ಷಿಕ ಚಂದಾ (Three Years) | 275-00 |
| ವಾರ್ಷಿಕ ಚಂದಾ (Annual) | 100-00 |
| ಬಿಡಿ ಪ್ರತಿ (Per Copy) | 10-00 |

### ಜಾಹೀರಾತು ವಿವರ (Advertisement Tariff)

**With Colourful Photo's Size D 1/8 Multicolour Attractive Cover**

| | | | |
|---|---|---|---|
| Back Cover | 5000-00 | Half Page | 1250-00 |
| Inner Cover | 3000-00 | Full Page | 2000-00 |

**ನಮ್ಮ ವಿಳಾಸ: *EDITOR, RANGAVITTALA***
***Sri Sripadaraja Mutt, No. 58, Raghavendra Colony,***
***Chamarajapet, Bangalore-18. Phone : 26914637, 26914571***

ವಿಜಯದಾಸರ ಶ್ರೀಕ್ಷೇತ್ರ ಚಿಪ್ಪಗಿರಿಯಲ್ಲಿ ಹರಿದಾಸವಾದ್ಯಗಳು ನಡೆಸುವ ಎಲ್ಲಾ ಸೇವಾ ಕಾರ್ಯಗಳಿಗೆ ತುಂಬು ಹೃದಯದ ಸ್ವಾಗತವಿರುತ್ತದೆ. ಇದು ಮಹೋನ್ನತ ಕ್ಷೇತ್ರ. ಎಲ್ಲ ಹರಿದಾಸರ ಸನ್ನಿಧಾನವಿರುವ ಪವಿತ್ರ ತಾಣ. ತಮ್ಮ ಯಾವುದೇ ಸೇವಾ ಕಾರ್ಯಗಳಿಗೆ ಈ ಕೆಳಕಂಡ ವಿಳಾಸ - ದೂರವಾಣಿಯಲ್ಲಿ ತಾವು ಸಂಪರ್ಕಿಸಬಹುದು.

**ಸಿ.ಎಚ್. ಜಗನ್ನಾಥದಾಸ್,**
**ವಿಜಯದಾಸರ ಕಟ್ಟೆ,**
ಚಿಪ್ಪಗಿರಿ, ಪಿನ್‌ಕೋಡ್ - 518396,
ಕರ್ನೂಲ್ ಜಿಲ್ಲೆ
ಫೋನ್ ನಂ : 09396506500, 09849266419, 09701894189

## ಜುಲೈ 2010ರ ಸಂಚಿಕೆಯಲ್ಲಿ

**ಮೊದಲಕಲ್ಲು ಶೇಷದಾಸರ ಜೀವನ ಮತ್ತು ಕೃತಿಗಳ ಅಧ್ಯಯನದ ಬಗ್ಗೆ ಚಿಂತನ ಧಾರೆಯನ್ನು ಜುಲೈ 2010ರ ಸಂಚಿಕೆಯಲ್ಲಿ ರಂಗವಿಠ್ಠಲ ನೀಡಬಯಸುತ್ತದೆ. ತಮ್ಮ ಲೇಖನಗಳಲ್ಲಿ ಆಧಾರಿತ ಕೃತಿಗಳನ್ನು ಆಯ್ದುಕೊಂಡಿರುವ ಗ್ರಂಥದ ಹೆಸರು, ಪುಟ, ಕೀರ್ತನೆಗಳ ಸಂಖ್ಯೆಯನ್ನು ಹಾಗೂ ವಿಮರ್ಶಿಸಿರುವ ಕೃತಿ ಮತ್ತು ಅದರ ಲೇಖಕರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿ ಕೋರಿದೆ.**

ಓದುಗರು ತಮ್ಮ ಲೇಖನಗಳನ್ನು ಜೂನ್ 25ರೊಳಗೆ ಕಳುಹಿಸಬೇಕೆಂದು ಕೋರಿದೆ. ತಮ್ಮ ಲೇಖನಗಳು ಶುದ್ಧಕೃತಿ ಮತ್ತು ತತ್ಸಂಬಂಧವಾದ ಪ್ರಮಾಣಗಳ ಪುರಸ್ಸರವಾಗಿದ್ದರೆ ಮಾತ್ರ ಸ್ವೀಕರಿಸಲಾಗುವುದು. ಪ್ರಮಾಣಗಳ ಆಧಾರಿತ ಗ್ರಂಥ ಮತ್ತು ವಿಷಯದ ಪುಟ ಸಂಖ್ಯೆಯನ್ನು ನಮೂದಿಸಲು ಕೋರಿದೆ.

ಆಗಸ್ಟ್ 2010ರ ರಂಗವಿಠಲ ಸಂಚಿಕೆಯಲ್ಲಿ **ಶ್ರೀ ಹರಿಕಥಾಮೃತಸಾರಕ್ಕೆ ಶ್ರೀ ಶ್ರೀದವಿಠ್ಠಲದಾಸರ ಫಲಸ್ತುತಿಯ** ಬಗ್ಗೆ ಅಧ್ಯಯನ ನಡೆಸಲು ನಿಶ್ಚಯಿಸಲಾಗಿದೆ. ಇದರ ಬಗ್ಗೆ ಲೇಖಕರು ದಯಮಾಡಿ ತಮ್ಮ ಲೇಖನಗಳನ್ನು ಜುಲೈ 10 ರೊಳಗೆ ಕಳುಹಿಸಬೇಕೆಂದು ಕೋರಿದೆ.

**ಸಂಪಾದಕ, ರಂಗವಿಠಲ.**

## ಶ್ರೀ ವಿಕೃತಿನಾಮ ಸಂವತ್ಸರ, ಜೇಷ್ಠಮಾಸ

**ಜೂನ್ 2010**

13. ಭಾವುಕಕರಿದಿನ, ದಶಹರವ್ರತಾರಂಭ.
15. ಮಿಥುನ ಸಂಕ್ರಮಣ.
19. ಶುಕ್ಲಾದೇವಿಪೂಜಾ,
21. ಭಗೀರಥ ಪ್ರಯತ್ನದಿಂದ ಗಂಗೆ ಭೂಮಿಗೆ ಬಂದ ದಿನ, ದಶಹರ ವ್ರತ ಸಮಾಪ್ತಿ.
22. **ಸರ್ವೇಷಾಮೇಕಾದಶೀ (ನಿರ್ಜಲಾ)**
23. ಪಾರಣೆ, ಶ್ರೀತ್ರಿವಿಕ್ರಮಪೂಜಾ ಶರ್ಕರೋದಕುಂಭದಾನ.
24. **ಶ್ರೀ ಶ್ರೀಪಾದರಾಜರ ಪೂರ್ವಾರಾಧನೆ,** ಪ್ರದೋಷ.
25. **ಶ್ರೀ ಶ್ರೀಪಾದರಾಜರ ಮಧ್ಯಾರಾಧನೆ,** (ಮುಳಬಾಗಿಲು)

    **ಶ್ರೀಲಕ್ಷ್ಮೀಕಾಂತತೀರ್ಥರ ಪುಣ್ಯ.ದಿನ.** (ವೆಂಗರೆ)
26. **ಶ್ರೀ ಶ್ರೀಪಾದರಾಜರ ಉತ್ತರಾರಾಧನೆ,**
    ಕಾರಹುಣ್ಣಿಮೆ ವಟಸಾವಿತ್ರಿವ್ರತ.
30. **ಶ್ರೀ ಸ್ವರ್ಣವರ್ಣತೀರ್ಥರ ಪುಣ್ಯ.ದಿನ.** (ಶ್ರೀರಂಗ).

**ಜುಲೈ 2010**

07. ಹರಿವಾಸರ 11-29 ರಿಂದ
08. **ಸರ್ವೇಷಾಮೇಕಾದಶಿ (ಯೋಗಿನೀ)**
09. ಪಾರಣೆ, ಪ್ರದೋಷ.
    ಶ್ರೀವಿಜಯೀಂದ್ರತೀರ್ಥರ ಪುಣ್ಯ.ದಿನ. (ಕುಂಭಕೋಣಂ)
10. ಕಾತ್ಯಾಯನಾನಂ ಪಿಂಡಪಿತೃಯಜ್ಞ
11. ಮಣ್ಣೆತ್ತಿನ ಅಮಾವಾಸ್ಯೆ.





## ಸಂದೇಶ

**ನಿನ್ನ ಪೂಜೆಯೊ ರಾಮ**
**ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ.**

ಭುವನ ಪಾವನನ ಉಪಾಸನೆಯಲ್ಲಿ ಭಕ್ತಿಮಾರ್ಗದ ಪ್ರವರ್ತಕರಾಗಿ ಶ್ರೀಪಾದರಾಜರು ರಾರಾಜಿಸುತ್ತಿರುವರು. ನಮ್ಮೆಲ್ಲರೊಳಗೂ ಹೊರಗೂ ವ್ಯಾಪಿಸಿರುವ ಭಗವಂತನಿಗೆ ಸಲ್ಲಿಸುವ ಮಹಾಪೂಜೆ ಯಾವುದು ಎಂಬ ಆಚರಣಾತ್ಮಕ ಚಿಂತನದ ಅಭಿವ್ಯಕ್ತಿಗಾಗಿ ಅವರ ಕೃತಿಯ ಅಧ್ಯಯನ ನಡೆದಿರುವುದು ಅಭಿನಂದನೀಯ.

ಯಾವುದು ಧರ್ಮ? ಯಾವುದು ಕರ್ಮ? ಯಾವುದು ಪೂಜೆ? ಎಂದು ಇಂದಿನ ಯುವಜನರು ಕೇಳುವ ಪ್ರಶ್ನೆಗಳಿಗೆ ಸಕಾರಾತ್ಮಕ ಸಂದೇಶಬೀರುವ ರಾಜರ ಕೃತಿಯಿದು. ಅಧ್ಯಯನದಲ್ಲಿ ಹರಿದಾಸರ ಇಂತಹ ಹಲವು ಕೃತಿಗಳ ವಿಶ್ಲೇಷಣೆಯೊಂದಿಗೆ ರೂಪುಗೊಂಡಿರುವ ಈ ಒಂದು ಚಿಂತನ ವೇದಿಕೆಯು ಮಾದರಿಯಾಗಬಲ್ಲುದು.

ನಮ್ಮ ಮನದ ಅಂಗಳದಲ್ಲಿ ನಡೆಯುವ ಎಲ್ಲ ಆಲೋಚನೆಗಳೂ ಭಗವಂತನ ಸ್ಮರಣೆಯಾಗಲಿ. ದೇಹದಲ್ಲಿನ ಹಾಗೂ ದೇಹದ ಮಾಧ್ಯಮದ ಮೂಲಕ ನಡೆಯುವ ಎಲ್ಲ ಕಾರ್ಯಗಳೂ ಅವನಿಗೆ ಮಾಡುವ ನಮನಗಳಾಗಲಿ.

ಹೀಗೆ ನಡೆವ ಎಲ್ಲ ಕಾರ್ಯಕ್ಷೇತ್ರದ ನಿಲುವು ಭಗವಂತನ ಮಹಾಪೂಜೆಯೆಂಬ ಸಂದೇಶದ ಕೃತಿ ಚಿಂತನದಲ್ಲಿ ಭಾಗವಹಿಸಿದ ಲೇಖಕ, ಓದುಗ ಬಂಧುಗಳಿಗೆ ಶ್ರೀಪಾದರಾಜರ ಅಂಕಿತನಾಮನಾದ **ರಂಗವಿಠಲ** ಮಂಗಳಪ್ರದನಾಗಲಿ ಎಂದು ಹಾರೈಸುತ್ತಾ ಮಾಡುವ.

**ನಾರಾಯಣಸ್ಮರಣೆಗಳು**
**ಶ್ರೀ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು**

## ಸಂಪಾದಕೀಯ

**ಶಬ್ದಾದೀನ್ ವಿಷಯಾನನ್ಯೇ**
**ಇಂದ್ರಿಯಾಗ್ನಿಷು ಜುಹ್ವತಿ** **ಭಗವದ್ಗೀತಾ 4.26**

ವಿಷಯಗಳಲ್ಲಿಯೂ –ಇಂದ್ರಿಯಗಳಲ್ಲಿಯೂ ವ್ಯಾಪಿಸಿ ರಾರಾಜಿಸುವವನು ಭಗವಂತ. ಇಂದ್ರಿಯವ್ಯಾಪ್ತವಾದ ಭಗದ್ರೂಪಗಳೇ ಅಗ್ನಿಯಲ್ಲಿಯೂ ಇದೆಯೆಂಬ ಅನುಸಂಧಾನದಿಂದ ಹವಿಸ್ಸನ್ನು ಹೋಮಿಸಬೇಕು. ಸ್ವರಮಣನಾದ ಪರಮಾತ್ಮನೇ ಇಂದ್ರಿಯಗಳಲ್ಲಿದ್ದು ವಿಷಯ ಪದಾರ್ಥಗಳಲ್ಲಿರುವ ಷಡ್ರಸರೂಪವಾದ ಆನಂದವನ್ನು ಸವಿಯುತ್ತಾನೆ ಎಂದು ತಿಳಿಯಬೇಕು. ಆಗ ನಾವು ಅಧ್ಯಾತ್ಮ ಯಜ್ಞ ಮಾಡಿದಂತಾಗಿ, ಅದರಫಲವಾಗಿ ಸುಖದ ಅನುಭವವನ್ನು ಪಡೆಯಬಹುದು.

ಇವುಗಳನ್ನೇ ಜಗನ್ನಾಥದಾಸರು **ಹರಿಕಥಾಮೃತಸಾರ** ರೂಪದಲ್ಲಿ ಸಜ್ಜನವೃಂದಕ್ಕೆ ಇತ್ತ ಚಿಂತನಧಾರೆಯಾಗಿದೆ.

ಮಕ್ಕಳ ಮನದಲ್ಲಿ ಮನೆ ಮಾಡಿರುವ ಕೃಷ್ಣನಿಗೆ, **ರಂಗನೆಂದು** ನಾಮಕರಣ ಮಾಡಿ ಸಂಭ್ರಮಿಸಿದ್ದಾರೆ **ಶ್ರೀಪಾದರಾಜರು. ತಮ್ಮದೆನ್ನುವ ಸರ್ವಸ್ವವನ್ನೂ ಸಮರ್ಪಿಸುವ ಭಕ್ತಿಕುಸುಮವೇ ಅಧ್ಯಯನದ ಕೇಂದ್ರಬಿಂದು.**

ಎಲ್ಲ ಭಾಗವತೋತ್ತಮರು ಬೇಡುವುದಾದರೂ ಏನನ್ನು? ಶ್ರೀಪಾದರಾಜರೇ ಹಾಕಿಕೊಟ್ಟ ಹರಿದಾಸಮಾರ್ಗದ ವಿಜಯಪ್ರದ ಮಂತ್ರಯಾವುದು? ತತ್ವಸಂಶೋಧನೆಯ ಮುಖ್ಯ ವಸ್ತುವಾದರೂ ಯಾವುದು? ಪ್ರಶ್ನೆಗಳ ಸರಪಳಿಗೆ ಉತ್ತರ, **ರಂಗವಿಠಲ**ನೀವ.

ಶ್ರೀಪಾದರಾಜರ ಕೃತಿಯಲ್ಲಿ ಮೂಡಿಬಂದ ತುಂಗಗುಣಪೂರ್ಣ **ರಂಗವಿಠಲ**ನ ಉಪಾಸನೆಯು ಲೇಖಕ ಬಂಧುಗಳಿತ್ತ ಲೇಖನಗಳ ಕೇಂದ್ರಬಿಂದುವಾಗಿದೆ. ಇಲ್ಲಿ ಒಳಗಣ್ಣಿನಿಂದ ಅಂತರಂಗದ ರಂಗನನ್ನು ನೋಡುವ ತವಕದ ತುಡಿತವಿದೆ. ನಾವು ಮಾಡುವುದೆಲ್ಲಾ ನಿನ್ನ ಪೂಜೆಯೇ ಆಗಲಿ ಎಂದು ಸರ್ವಕರ್ಮ ಸಮರ್ಪಣಭಾವದ ಆಚರಣೆಯ ಮೂಲಕ **ರಂಗವಿಠಲ**ನ ಅನುಗ್ರಹ ನಮಗೆಲ್ಲ ಆಗಲಿ.

ಶ್ರೀಪಾದರಾಜರ ಕೃತಿಯ ಅಧ್ಯಯನದಲ್ಲಿ ನಮ್ಮ ನಿರೀಕ್ಷೆಗೂ ಮೀರಿ ಬಂದ ಲೇಖನಗಳು ಹರುಷ ತಂದಿವೆ.

**ಸಂಪಾದಕ, ರಂಗವಿಠಲ**





**ವಿಚಾರ ಸಂಕಿರಣ**

**ದಾಸ ಸಾಹಿತ್ಯ ಗಂಗೆಯನ್ನು ತಮ್ಮ ಸುಮಧುರ ಕಂಠಸಿರಿಯಲ್ಲಿ ಪ್ರಸಾರ ಮಾಡುವ ಪ್ರತಿಭಾನ್ವಿತ ವಿದ್ವಾಂಸರು, ಪ್ರವಚನರತ್ನರೂ ಆದ ವಿದ್ವಾನ್ ಖೇಡಾ ವೇದವ್ಯಾಸಾಚಾರ್ಯರು ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಷಯ**

## ಆಚಾರ ವಿಚಾರಗಳ ಜಾಗೃತಿಯಲ್ಲಿ ದಾಸಸಾಹಿತ್ಯ

ಹರಿದಾಸರು ರಚಿಸಿದ ಕೃತಿಗಳಲ್ಲಿ **ವಿಧಿ ನಿನ್ನ ಸ್ಮರಣೆ, ನಿಷೇಧ ವಿಸ್ಮೃತಿಯೆಂದು, ಮಿಂದದ್ದೇ ಗಂಗಾದಿ ಪುಣ್ಯತೀರ್ಥಂಗಳು, ನಿಂದದ್ದೆ ಗಯಾವಾರಣಾಸೀ ಕುರುಕ್ಷೇತ್ರ** ಎಂಬಂತೆ ಆಚಾರ-ವಿಚಾರಗಳ ಜಾಗೃತಿ ಮೂಡಿಸಿದ್ದಾರೆ.

**ಕಂಡ ಕಂಡದ್ದೆಲ್ಲ ವಿಶ್ವಾದಿ ಮೂರ್ತಿಗಳು**
**ಚೆಲ್ವ ಶ್ರೀಪುರಂದರವಿಠಲರಾಯನ್ನ**
**ಬಲ್ಲವರಿಗೆಲ್ಲಿಹುದೊ ಪಾಪಪುಣ್ಯದ ಲೇಪ**

ಹೀಗೆ ನಿತ್ಯ ಕರ್ಮಾನುಷ್ಠಾನದಲ್ಲಿ ಹರಿಯ ಸ್ಮರಣೆ, ಸತತವಾಗಿ ನಡೆಯುತ್ತಿರಬೇಕು ಎಂದು ಪುರಂದರದಾಸರು ತಿಳಿಸಿದ ಪ್ರಕಾರವೇ ವಿಜಯದಾಸರ ಈ ಕೆಳಗಿನ ಕೃತಿಯಲ್ಲಿ ತಿಳಿಸಿದ್ದಾರೆ.

**ಹಾಳು ಹರಟೆಗೆ ಹೋಗಬೇಡ**
**ಕಂಡ ಕೂಳನು ತಿಂದು ಒಡಲು ಹರೆಯಬೇಡ**
**ಎಚ್ಚೆತ್ತು ಇರು ಕಂಡ್ಯ ಮನವೆ**

ದಾಸರು ಆಚಾರ-ವಿಚಾರಗಳ ಬಗ್ಗೆ ಎಚ್ಚರವಹಿಸಬೇಕೆಂದು ತಿಳಿಸಿರುವರು. **ಶ್ರುತಿ-ಸ್ಮೃತಿ-ಹರೇರಾಜ್ಞ** ಎಂದು ತಿಳಿಸಿ, ವ್ಯಾಸ-ದಾಸ ದೃಷ್ಟಿಕೋನಗಳ ಬಗ್ಗೆ ಸಮನ್ವಯ ಮಾಡುತ್ತಾ ಸಂಗೀತ ಮಾಧ್ಯಮದ ಪ್ರಯೋಗದೊಂದಿಗೆ ಹಾಳು ಹರಟೆ ಹೊಡೆಯಬೇಡಿ, **ಎಚ್ಚೆತ್ತು ಇರು ಕಂಡ್ಯ ಮನವೇ** ಎಂದು ದಾಸರ ಕೃತಿಗಳಿಂದ ತಿಳಿಯಬಹುದಾಗಿದೆ. ನಮಗೆ ಸ್ಥಿರ ಸೊತ್ತು ಇದೆ. ಪುರುಸೊತ್ತು ಇಲ್ಲಾ ಎನ್ನುವವರಿಗೆ ಎಚ್ಚರಿಕೆ ಕೊಟ್ಟಿರುವರು ದಾಸರುಗಳು. ಎಲ್ಲ ಕಾಲವು ಪರ್ವಕಾಲವೇ, ಎಲ್ಲ ದೇಶವೂ ಪುಣ್ಯಧಾಮವೇ ಆಗಿರುತ್ತವೆಂದು ಸಾರಿದರು. ಬಾದರಾಯಣರು ತಿಳಿಸಿದ ಕರ್ಮಕ್ಷಯದ ಉಪಾಸನಾ ವಿಧಾನ ಕುರಿತು ಸ್ವಾರಸ್ಯಕರವಾಗಿ ಮಂಡಿಸಿದರು.

**ಮಮಸ್ವಾಮಿ ಹರೇರ್ನಿತ್ಯಂ** ಎಂದು ತಿಳಿಸಿ **ಕಂಡ ಕಂಡದ್ದೆಲ್ಲಾ ಕಮಲನಾಭನ ಮೂರ್ತಿ** ಎಂಬ ಕೀರ್ತನೆಯ ಚಿಂತನ ಧಾರೆಯನ್ನು ಎಲ್ಲರೂ ಸವಿಯುವಂತೆ ದಾಸರುಗಳು ಹಾಡಿದ್ದಾರೆ. ಜಗನ್ನಾಥದಾಸರು **ಫಲವಿದು ಬಾಳ್ದುದಕೆ** ಎಂಬ ಹಾಡಿನಲ್ಲಿ ನಲಿವನ್ನು ತೋರಿದ್ದಾರೆ. **ನಿಧಿಯು ಬದಿಯಲಿದ್ದರೂ ಮರುಳಾದೆಯೆಲ್ಲೋ ಉದ್ಧವಾ** ಎಂಬ ಗೋಪಿಯರ ಉದ್ಧವಗೀತಾ ಸುಮಧುರವಾಗಿದೆ.

**ವಿದ್ವಾನ್ ಖೇಡಾ ವೇದವ್ಯಾಸಾಚಾರ್ಯ**

## ವಿಚಾರ ಸಂಕಿರಣ

**ವಿದ್ವಾನ್ ಆದೋನಿ ವಾಸುದೇವಾಚಾರ್ಯರು** ತಿಳಿಸಿದಂತೆ ವಿಧಿನಿರ್ವಹಣೆಯೇ ಆಚಾರ ಎಂಬುದನ್ನು ತಿಳಿಹೇಳಿದರು. ಮಂಡನೆಯಲ್ಲಿ ಸಂಕಲ್ಪ ಪೂರ್ವಕ ಮಾಡುವ ಆಚಾರಗಳೆಲ್ಲ ಭಗವಂತನಿಗೆ ಸೇರುತ್ತವೆ. ಸದಾ ಹರಿಸ್ಮರಣೆಯಲ್ಲಿ ನಿರತರಾದಾಗ ಮನಸ್ಸು-ಶರೀರಗಳು ತೇಜೋಮಯವಾಗಿ ಜೀವನದ ಉಜ್ಜೀವನಕ್ಕೆ ನಾಂದಿಯಾಗುವುದು. ಏಕಾದಶಿ ಎಂಬುದು ಪವಿತ್ರವಾದ ವ್ರತ. ಏಕಾದಶಿಯನ್ನು ಎಲ್ಲ ಧರ್ಮದವರೂ ಆಚರಿಸಲೇಬೇಕು. ತತ್ರಾಪಿ ಬ್ರಾಹ್ಮಣರು ಅದರಲ್ಲಿಯೂ ದೇವಸ್ಥಾನ ಹಾಗೂ ಮಠಗಳಲ್ಲಿ ಕಡ್ಡಾಯವಾಗಿ ಆಚರಿಸಿ ಇತರರಿಗೆ ಮಾರ್ಗದರ್ಶಕರಾಗಬೇಕು.

**ವಿದ್ವಾನ್ ಹೊಳವನಹಳ್ಳಿ ಶ್ರೀನಿವಾಸಾಚಾರ್ಯರು** ನೀಡಿದ ವಿಚಾರ ವಾಣಿಯಲ್ಲಿ ಸ್ನಾನವಿಧಿಯನ್ನು ಕುರಿತು ತಿಳಿಸುವಾಗ ಸಂಕಲ್ಪ, ಆಸನಜಯ, ಸದಾಸನಜಯ, ಧ್ಯಾನದಕ್ರಮ, ಏಕಾಗ್ರತೆಯ ಸಾಧನೆ, ಪೂಜೆ ಮಾಡುವ ವಿಧಾನ, ಋಜುಕಾಯತ್ವ ಮುಂತಾದುವುಗಳ ಬಗ್ಗೆ ವಿಶದಪಡಿಸಿದರು. ಸಕಲ ತೀರ್ಥಾಭಿಮಾನಿದೇವತೆಗಳ ಸ್ಮರಣೆ ಮಾಡುತ್ತ ಎಲ್ಲ ಪವಿತ್ರ ನದಿಗಳ ಸನ್ನಿಧಾನತ್ವೇನ ಸ್ನಾನ ಸಂಕಲ್ಪ ಮಾಡಬೇಕು. ನೀರು ಯಾವಾಗಲೂ ಪವಿತ್ರವೆ. ತನು ಶುದ್ಧಿಯೊಂದಿಗೆ ಮನ ಶುದ್ಧಿಯಾಗಬೇಕು. ಬ್ರಾಹ್ಮೀಮುಹೂರ್ತದಲ್ಲಿ ಸ್ನಾನ ಸಂಕಲ್ಪ, ಸ್ನಾನಾದಿಗಳನ್ನು ಮಾಡುವುದರಿಂದ ಮನಸ್ಸು ಉಲ್ಲಾಸಗೊಳ್ಳುತ್ತದೆ.

**ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯರು** ಅಂತರಂಗದ ಶುದ್ಧಿಗಾಗಿ ಆಚಾರ ಎಂದು ನಿರೂಪಿಸುತ್ತಾ **ಮೃತ್ತಿಕಾ** ಧಾರಣ ವಿಧಿಯನ್ನು ತಿಳಿಸಿದರು.' ಶೌಚಾಚಾರವಿಲ್ಲದಿದ್ದರೆ ಎಲ್ಲ ಆಚಾರಗಳೂ ನಿಷ್ಫಲ. ಶೌಚದಲ್ಲಿ ಬಾಹ್ಯ ಹಾಗೂ ಅಂತರಂಗಗಳ ಶೌಚ ಎಂದು ವಿವರ ನೀಡಿದರು.

**ವಿದ್ವಾನ್ ಮೋಹನಾಚಾರ್ಯರು** ಸುಪ್ರಭಾತದ ಅರ್ಥವನ್ನು ತಿಳಿಸಿದರು. ಸುಪ್ರಭಾತವೆಂಬುದು ಭಗವಂತನಿಗೆ ನಮ್ಮ ಇರವನ್ನು ತಿಳಿಸಿ ಕರುಣಿಸಲು ಪ್ರಾರ್ಥನೆ. ಭಗವಂತನ ಸ್ಮರಣೆಯಿಂದಲೇ ಏಳಬೇಕು, ಕಪಿಲ ಗೋ ದರ್ಶನ ಮಾಡಬೇಕು, ದರ್ಪಣದಲ್ಲಿ ಪ್ರತಿಬಿಂಬ ಕಂಡು ಸೂರ್ಯದರ್ಶನ ಮಾಡುವುದರ ಮಹತ್ವವನ್ನು ತಿಳಿಸಿದರು.

**ವಿದ್ವಾನ್ ಸತ್ಯನಾರಾಯಣಾಚಾರ್ಯರು** ಆಚಾರ-ವಿಚಾರದಲ್ಲಿ ಆಧುನಿಕಯುಗದ ಬದುಕಿನ ಪ್ರಚಲಿತ ಸಮಸ್ಯೆಗಳು ಮತ್ತು ಪರಿಹಾರವೆಂಬ ಪ್ರಸ್ತುತ ಕಾಲದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿ ಪರಿಹಾರರೂಪದ ಆಚಾರ-ವಿಚಾರಗಳ ಬಗ್ಗೆ ತಿಳಿಸಬೇಕೆಂದರು.





# ನಮಸ್ಕಾರ ಯಾರಿಗೆ ?

**ವೃಷಭನೇರಿದ ವಿಷಧರನ್ಯಾರೆ ಪೇಳಮ್ಮಯ್ಯ॥**

**ಬಾಲೆ ದಾಕ್ಷಾಯಿಣಿ ಪತಿ ಇವನಮ್ಮ-ಮಾವನ ಯಾಗದಲಿ**
**ಬ್ಬಾಳ ಕೃತ್ಯಗಳನ್ನು ನಡೆಸಿದವನಮ್ಮ -**

-ಸಮಗ್ರ ದಾಸ ಸಾಹಿತ್ಯ ಸಂಪುಟ 1 (ಪುಟ-58)

## ನಮಸ್ಕಾರ ದಕ್ಷಪ್ರಜಾಪತಿಗೋ, ರುದ್ರಾಂತರ್ಗತ ಶ್ರೀಹರಿಗೋ?

ದಕ್ಷಪ್ರಜಾಪತಿಯು ಒಮ್ಮೆ ಸತ್ರಯಾಗ ಕೈಗೊಂಡನು. ಯಾಗಕ್ಕೆ ಸಕಲ ದೇವಾನುದೇವತೆಗಳು ಆಗಮಿಸಿದ್ದರು. ನೆರೆದಿದ್ದ ಸಭೆಗೆ ದಕ್ಷನು ಬಂದ. ಅವನು ಬಂದ ಕೂಡಲೇ ಬ್ರಹ್ಮ, ರುದ್ರರನ್ನು ಬಿಟ್ಟು ಉಳಿದವರೆಲ್ಲರೂ ಎದ್ದು ನಿಂತರು. ದಕ್ಷನು ಬ್ರಹ್ಮದೇವರಿಗೆ ನಮಿಸಿ ಕುಳಿತನು. ಆದರೆ ರುದ್ರನು ಎದ್ದು ನಿಂತು ತನ್ನನ್ನು ನಮಸ್ಕರಿಸಿ, ಗೌರವಿಸಲಿಲ್ಲ ಎಂಬ ಆತ್ಮಪ್ರತಿಷ್ಠೆ ಕ್ರೋಧದ ಸನ್ನಿವೇಶಕ್ಕೆ ನಾಂದಿಯಾಯಿತು. ದಕ್ಷನು ಸಿಟ್ಟಿನಿಂದ ಗುಡುಗಿದ. ದುಷ್ಟ ವಚನಗಳಿಂದ ರುದ್ರದೇವನನ್ನು ನಿಂದಿಸಿದ. ಶಿವನಿಗೆ ಯಜ್ಞಭಾಗವು ಲಭಿಸದಿರಲೆಂದು ತಿಳಿಸಿ ದಕ್ಷನು ಸಭೆಯಿಂದ ಎದ್ದು ನಡೆದ.

ಅಳಿಯನಾದವ ಮಾವನಿಗೆ ನಮಸ್ಕರಿಸುವುದು ಧರ್ಮವಲ್ಲವೆ? ಎಂಬ ಭಾವನೆ ದಕ್ಷನಲ್ಲಿ ನಿಂತಿತು. ನಮಸ್ಕಾರವನ್ನು ಜೀವರ ಅಂತರ್ಯಾಮಿಯಾದ ಭಗವಂತನಿಗೆ ಸಲ್ಲಿಸಬೇಕು ಎಂಬುದು ಧರ್ಮ. ದಕ್ಷನಲ್ಲಿ ಅಹಂಕಾರವು ತುಂಬಿದ್ದರಿಂದ ಹಾಗೂ ರುದ್ರದೇವರು ದಕ್ಷಪ್ರಜಾಪತಿಗಿಂತ ತಾರತಮ್ಯದಲ್ಲಿ ದೊಡ್ಡವರಾದ್ದರಿಂದ ದಕ್ಷನಿಗೆ ನಮಸ್ಕರಿಸಲಿಲ್ಲ.

ರುದ್ರದೇವರನ್ನು ಕುರಿತು ಸ್ತೋತ್ರ ಮಾಡುವ ಈ ಕೀರ್ತನೆಯಲ್ಲಿ ಶ್ರೀ ಶ್ರೀಪಾದರಾಜರು ನಮಸ್ಕಾರವೆಂಬ ಕಾರ್ಯವು ಹರಿಪೂಜೆಯೆಂದು ಭಾವಿಸಬೇಕು ಎಂಬ ಸಂದೇಶವನ್ನು ನೀಡಿದ್ದಾರೆ.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**

**ಶ್ರೀ ಶ್ರೀಪಾದರಾಜರು ಹೇಳಿದ ಕಥೆಗಳು**

## ಹರಿ ಸರ್ವೋತ್ತಮತ್ವ

**ಗಂಗೆ ಈತನ ಪಾದಸಂಗದಿ ಪಾವನವೆನಲು**
**ಗಂಗಾಧರನು ಪರಮದಾಸನೆನಲು**
**ಮಂಗಳಾತ್ಮಕ ವಿಶ್ವಜನ್ಮಾದಿಕಾರಣನು**
**ರಂಗವಿಠಲರೇಯನ ನೆರೆನಂಬಿರೋ**

-ಸಮಗ್ರ ದಾಸ ಸಾಹಿತ್ಯ ಸಂಪುಟ 1 (ಪುಟ-15)

ಭಾಗವತ ಪಂಚಮಸ್ಕಂದದ ತ್ರಿವಿಕ್ರಮಾವತಾರ ಭಾಗದಿಂದ ಗಂಗೆ ಉತ್ಪತ್ತಿಯ ಕಥೆಯನ್ನು ಈ ಸಾಲುಗಳಲ್ಲಿ ನೀಡಲಾಗಿದೆ.

ಪರಮಾತ್ಮನ ಸರ್ವಶ್ರೇಷ್ಠತ್ವವನ್ನು ವಿವರಿಸುವ ಕೀರ್ತನೆಯಿದು.

**ಬಲಿಚಕ್ರವರ್ತಿ**ಯು ಯಾಗವನ್ನು ಮಾಡುತ್ತಾನೆ. ವಾಮನರೂಪಿ ಪರಮಾತ್ಮ ಪುಟ್ಟವಟುವಾಗಿ ಯಾಗಶಾಲೆಗೆ ಬರುತ್ತಾನೆ. ಬಲಿಚಕ್ರವರ್ತಿಯಲ್ಲಿ ಮೂರು ಹೆಜ್ಜೆ ದಾನವನ್ನು ಬೇಡುತ್ತಾನೆ. ಬಲಿಯು ತಡಮಾಡದೆ ದಾನ ನೀಡುತ್ತಾನೆ. ವಾಮನನು ತ್ರಿವಿಕ್ರಮರೂಪವನ್ನು ಧರಿಸಿ ಪಾದದ ನಖದಿಂದ ನಭೋಮಂಡಲವನ್ನು ಸೀಳುತ್ತಾನೆ. ಅಲ್ಲಿಂದ ಗಂಗೆಯು ಪರಮಾತ್ಮನ ಪಾದವನ್ನು ತೊಳೆದು ಭೂಮಿಗೆ ಹರಿಯುತ್ತಾಳೆ.

ಪರಮಾತ್ಮನ ಪಾದತೊಳೆದ ಗಂಗೆಯನ್ನು ಶಿವನು ತನ್ನ ತಲೆಯಲ್ಲಿ ಧರಿಸುತ್ತಾನೆ. ಇದರಿಂದ ಶಿವನು ಗಂಗಾಧರನೆಂದು ಕರೆಸಿಕೊಳ್ಳುತ್ತಾನೆ.

ಶ್ರೀಪಾದರಾಜರು ಗಂಗೆ ಮತ್ತು ರುದ್ರದೇವರ ಕಥೆಯಿಂದ ಹರಿಸರ್ವೋತ್ತಮತ್ವವನ್ನು ಧೃಡಪಡಿಸಿದ್ದಾರೆ ಮತ್ತು ಹರಿಪಾದೋದಕಕ್ಕೆ ರುದ್ರದೇವರು ನೀಡಿದ ಸ್ಥಾನವನ್ನು ಇಲ್ಲಿ ವಿಶದ ಪಡಿಸಿದ್ದಾರೆ. ಪಾದೋದಕ ಧರಿಸಿದ್ದರಿಂದ ಸರ್ವ ಸಮರ್ಪಣಾ ಭಾವವನ್ನು ಪ್ರಚುರಪಡಿಸಿದಂತಾಗುತ್ತದೆ.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**



**ವಿಚಾರ ಸಂಕಿರಣ**

ಒಂದು ದಿನಕ್ಕೆ ಕನಿಷ್ಠ ಪಕ್ಷ 5 ಸಲ ಪ್ರಾಣಾಯಾಮವನ್ನು ಸಂಧ್ಯಾವಂದನ ಕಾಲಕ್ಕೆ ಮಾಡುತ್ತೇವೆ. ಒಂದು ಆವರ್ತದಲ್ಲಿ 30 ಸೆಕೆಂಡುಗಳಂತೆ ನಿಯತ್ರಿಸಿದರೆ. ಒಂದು ದಿನಕ್ಕೆ ಎರಡೂವರೆ ನಿಮಿಷಗಳ ನಿಯಂತ್ರಣವಾಗುತ್ತದೆ. ಹೀಗೆ ಮಾಡಿದಲ್ಲಿ ನೂರುವರ್ಷಕ್ಕೆ ಕನಿಷ್ಠ ಪಕ್ಷ 5 ವರ್ಷಗಳಷ್ಟಾದರೂ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದು.

ಆಯಾಸಗಳಿಂದ ಉಸಿರಾಟವು ಹೆಚ್ಚುತ್ತದೆ. ಆಗ ಆಯುಷ್ಯ ಕಡಿಮೆಯಾಗುತ್ತದೆ ಏರಿಳಿತಗಳನ್ನು ಸರಿಪಡಿಸಲು ಪ್ರಾಣಾಯಾಮ ಒಂದೇ ಸೂಕ್ತಮಾರ್ಗ ಮತ್ತು ಆಧ್ಯಾತ್ಮಿಕವಾಗಿ ಪರಮಾತ್ಮನನ್ನು ಧ್ಯಾನಿಸಲು ಉತ್ತಮ ಸಾಧನ.

**ಹರಿಕಥಾಮೃತಸಾರ**ದಲ್ಲಿ ದಾಸರು ತಿಳಿಸಿದಂತೆ ಪ್ರತಿದಿನವೂ 21,600 ಬಾರಿ ವಾಯುದೇವರು ಪ್ರತಿ ಜೀವರಲ್ಲೂ **ಹಂಸಮಂತ್ರ** ಜಪಮಾಡುತ್ತಿರುವರು. ಪ್ರಾಣಾಯಾಮ ಮಾಡುವುದರಿಂದ ಉಸಿರಾಟದ ವರ್ತುಲವನ್ನು ನಿಬಂಧಿಸಿದಂತೆ. ಹಾಗಾದಾಗ ದೀರ್ಘಾಯುಗಳಾಗಿ ಬಾಳುವಂತೆ ಪ್ರಾಣಾಯಾಮದ ಯೋಗಸಿದ್ಧಿಯಾಗುವುದು. ಬದುಕಿನಲ್ಲಿ ಶಾಂತಚಿತ್ತರಾಗಿರುತ್ತಾರೆ. ದುಗುಡವಿಲ್ಲದ ಬಾಳು ನಮ್ಮದಾಗುವುದರಲ್ಲಿ ಸಂದೇಹವಿಲ್ಲ.

ಆದ್ದರಿಂದ ಪ್ರಾತಃಕಾಲದ ನಿಯಮಿತ ವೇಳೆಯಲ್ಲಿ ನಿತ್ಯವೂ ಪ್ರಾಣಾಯಾಮ ಮಾಡಬೇಕು. ಹೀಗೆ ಮಾಡುವುದರಿಂದ ಆಯುಸ್ಸುಃ ವೃದ್ಧಿ, ಮನಸ್ಸಿನ ಶಾಂತಸ್ಥಿತಿ, ಶುದ್ಧ ಶರೀರ ಆರೋಗ್ಯಾದಿಗಳ ಪ್ರಾಪ್ತಿ ಸಾಧಿಸಬಹುದು. ಷಟ್ ಪ್ರಶ್ನೋಪನಿಷತ್ ತಿಳಿಸಿದ ಆಚಾರವಿಚಾರಗಳು ಶ್ರೀಹರಿ ಪ್ರೀತಿಗಾಗಿಯೇ ಎಂದು ತಿಳಿದು ಸಕಲ ತೀರ್ಥಗಳ ಸನ್ನಿಧಾನವೆಂದೇ ಸ್ನಾನ ಸಂಕಲ್ಪ ಮಾಡಬೇಕಾಗಿದೆ. ನೀರು ಯಾವಾಗಲೂ ಪವಿತ್ರವೆಂದು ತಿಳಿದು ಪ್ರತಿಯೊಂದು ಸತ್ಕರ್ಮಾಚರಣೆಯನ್ನು ಶ್ರದ್ಧಾ, ಭಕ್ತಿಗಳಿಂದ ಮಾಡಬೇಕು.

ಸತ್ಯ ಸಂಕಲ್ಪನಾದ ಭಗವಂತನ ಚಿಂತನೆಯಲ್ಲಿ ನಮ್ಮ ಬಾಳು ಸಾಗಬೇಕು. ಪ್ರಾತಃ ಕಾಲದಲ್ಲಿ ನಾವು ಮಾಡುವ ಸಂಕಲ್ಪ ಅತ್ಯಂತ ಮಹತ್ವದಿಂದ ಕೂಡಿದ್ದು ಆದರಿಂದ ನಾವು ದೀರ್ಘಾಯುಷಿಗಳಾಗಿ, ತೇಜೋಮಯರಾಗಿ ಆರೋಗ್ಯವಂತರಾಗಿ ಬಾಳುತ್ತೇವೆ.

**ವಿದ್ವಾನ್ ಮಾಳಗಿ ರಾಮಾಚಾರ್ಯರು**

**ಮೈಸೂರಿನ ಓರಿಯಂಟಲ್ ಸಂಶೋಧನಾ ಕೇಂದ್ರ ಹಾಗೂ ತಿರುಪತಿಯ ರಾ. ಸಂ. ವಿದ್ಯಾಪೀಠದಲ್ಲಿ ಸಂಶೋಧಕರಾಗಿದ್ದ ವಿದ್ವಾನ್ ಮಾಳಗಿ ರಾಮಾಚಾರ್ಯರ ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಷಯ**

# ಪ್ರಾತಃ ಸಂಕಲ್ಪ

**ನಾಹಂ ಕರ್ತಾ ಹರಿಃ ಕರ್ತಾ** ವೆಂಬ ಸೂಕ್ತಿಯಂತೆ ನಮ್ಮಪಾಲಿನ ಕರ್ತವ್ಯವೇನೆಂಬುದನ್ನು ತಿಳಿದು ಆಚರಿಸಬೇಕು. ನೈಚ್ಛಾನು ಸಂಧಾನಕ್ಕೆ ಸಂಕಲ್ಪವೇ ಪ್ರಥಮ ಕ್ರಿಯೆ. ಸಂಕಲ್ಪವು ದೇಹ ಶುದ್ಧಿ, ಮನಸ್ಸು, ವಸ್ತ್ರಗಳ ಶುದ್ಧಿಯಿಂದ ನಡೆಸಬೇಕಾಗುತ್ತದೆ. ಆಚಮನ ಪ್ರಾಣಾಯಾಮಗಳನ್ನು ಮಾಡಿ ಸಂಕಲ್ಪವನ್ನು ಪ್ರಾರಂಭಿಸಬೇಕು

**ಪ್ರಾತಃ ಸಂಕಲ್ಪವನ್ನು** ಈ ಮೇಲೆ ತಿಳಿಸಿದ ಯಾವಕ್ರಿಯೆಗಳು ಇಲ್ಲದೇ ನಿದ್ರೆಯಿಂದ ಎದ್ದ ತಕ್ಷಣ **ಪ್ರಾತಃ ಪ್ರಭೃತಿ ಸಾಯಾಂತಂ ಸಾಯಾದಿ ಪ್ರಾತರಂ ತತಃ । ಯತ್ಕ್ಕೋರಷಿ ಜಗನ್ನಾಥ ತದಸ್ತು ತವ ಪೂಜನಮ್॥** ವೆಂಬ ಶ್ಲೋಕವನ್ನು ಪಠಿಸುವದರಿಂದ ಮೊದಲನೆಯ ಸಂಕಲ್ಪವನ್ನು ಮಾಡಿದಂತಾಗುತ್ತದೆ.

ಬೆಳಿಗ್ಗೆ ಎದ್ದಾಗಿನಿಂದ ಸಂಜೆಯವರೆಗೆ ಸೂರ್ಯನ ಅಡಿಯಲ್ಲಿ ನಡೆಸುವ ಎಲ್ಲಾ ಕಾರ್ಯಗಳು ಸೂರ್ಯಾಂತರ್ಗತ ಸೂರ್ಯ ನಾರಾಯಣನ ಸೇವೆಯೆಂದು ಭಾವಿಸಿ ಸಂಕಲ್ಪಿಸಿಕೊಳ್ಳಬೇಕು.

ಸಾಯಂಕಾಲ ಮೊದಲ್ಗೊಂಡು ಮರುದಿನ ಬೆಳಿಗಿನವರೆಗೂ ಕಾರ್ಯಗಳೆಲ್ಲವನ್ನೂ ಚಂದ್ರಾಂತರ್ಗತ ಶ್ರೀ ನಾರಾಯಣನಿಗೆ ಸಮರ್ಪಿಸಬೇಕು. ಅಥವಾ ಅವನ ಆಜ್ಞೆಯಂತೆ ಎಲ್ಲಾ ಕಾರ್ಯವನ್ನು ಮಾಡುತ್ತೇನೆಂದು ಮತ್ತು ಮಾಡಿದ ಕಾರ್ಯಗಳು ಅವನ ಪೂಜೆಯೆಂದು ಸಂಕಲ್ಪಿಸಬೇಕು.

ಈ ರೀತಿ ಸಂಕಲ್ಪ ಮಾಡುವುದರಿಂದ ಮಾನವನ ಮನಸ್ಸು ವಿಚಲಿತವಾಗುವುದನ್ನು ತಡೆಯಬಹುದಾಗಿದೆ. ಸಂಕಲ್ಪದಿಂದ ಕಾರ್ಯಸಾಧನೆಯ ಧೃಡತೆಯುಂಟಾಗುವುದು. ಯಾವಕಾರ್ಯವನ್ನು ಪ್ರಾರಂಭಿಸಬೇಕಾದರು ಸಂಕಲ್ಪವನ್ನು ಮಾಡಿಯೇ ಪ್ರಾರಂಭಿಸಬೇಕು.

ಸಂಕಲ್ಪದಲ್ಲಿ ಮುಖ್ಯವಾದದ್ದು ಆಚಮನ, ಪ್ರಾಣಾಯಾಮ. ಪ್ರಾಣಾಯಾಮವು ವೈಜ್ಞಾನಿಕ ಮಹತ್ವವನ್ನೂ ಹೊಂದಿದೆ.

ಉಸಿರಾಟದ ನಿಬಂಧನೆಯೇ ಪ್ರಾಣಾಯಾಮವೆಂದು ತಿಳಿಸುತ್ತಾರೆ. ಮಾನವನ ಆಯುಷ್ಯವನ್ನು ಅವನ ಉಸಿರಾಟದ ಗಣನೆಯಿಂದ ಪರಿಗಣಿಸಲಾಗುತ್ತದೆ. ಒಂದು ದಿನಕ್ಕೆ 21,600 ಬಾರಿ ಉಸಿರಾಟವನ್ನು ನಡೆಸಬೇಕಾಗಿದೆ. ಉಸಿರಾಟವನ್ನು ಹೆಚ್ಚಿಸಿದಾಗ ಆಯುಷ್ಯವು ಕಡಿಮೆಯಾಗುತ್ತದೆ. ಉಸಿರಾಟವನ್ನು ನಿಯಂತ್ರಿಸಿದಾಗ ಆಯುಷ್ಯವು ಹೆಚ್ಚುತ್ತದೆ. ಹರಿಕಥಾಮೃತಸಾರದಲ್ಲಿ ಇದರ ವಿವರಣೆಯನ್ನು ಕಾಣಬಹುದು.





# ಪೂಜೆ ಯಾರಿಗೆ?

**ಸರಸಿಜಾತನ ಸುತನ ಭೃಗುವನಟ್ಟಲು ಪೋದ**
**ಅರಿದು ಬಹೆನೆಂದು ಪದ್ಮಜನ ಸಭೆಗೆ ॥**

**ಮುನಿವರನು ಕಂಡು ಪದ್ಮಜಗೆ ವಂದಿಸದಿರಲು**
**ವನಜಭವ ಕೋಪವನು ಮಾಡಿ ಜರಿಯೆ।**

-ಸಮಗ್ರ ದಾಸ ಸಾಹಿತ್ಯ ಸಂಪುಟ 1 (ಪುಟ-14)

ಸರಸ್ವತೀ ನದಿಯ ತೀರದಲ್ಲಿ ಸತ್ರಯಾಗ ನಡೆಯುತ್ತಿತ್ತು. ಋಷಿಗಳ ಗೋಷ್ಠಿಯಲ್ಲಿ ಪೂಜೆಯಾರಿಗೆ ಸಲ್ಲಬೇಕೆಂಬ ವಿಷಯದಲ್ಲಿ ಚರ್ಚೆ ಏರ್ಪಟ್ಟಿತು. ಭೃಗುಋಷಿಗಳಿಗೆ ತೀರ್ಮಾನಿಸಲು ಹೇಳಿದರು.

ಭೃಗು ಮಹರ್ಷಿಗಳು ಬ್ರಹ್ಮದೇವರ ಬಳಿ ಬಂದರು. ತಂದೆ ಎಂಬ ಸಲಿಗೆಯಿಂದ ಭೃಗುಋಷಿಗಳು ಬ್ರಹ್ಮನನ್ನು ಕೂಡಲೆ ವಂದಿಸಲಿಲ್ಲ. ಬ್ರಹ್ಮನು ಋಷಿಗಳ ಕಡೆ ದೃಷ್ಟಿಯನ್ನು ಹಾಯಿಸಲಿಲ್ಲ. ಮಗನಾದ ಭೃಗುವಿನ ಕಡೆಗೆ ಪ್ರೀತಿಯನ್ನೂ ತೋರಲಿಲ್ಲ. ಚಿಕ್ಕವರಿಗೆ ಹಿರಿಯರು ಆಶೀರ್ವದಿಸಬೇಕು ಎಂಬುದು ಲೋಕ ನ್ಯಾಯ ಹಾಗೂ ಧರ್ಮವೂ ಆಗಿರುತ್ತದೆ. ಹಾಗೆ ಮಾಡದಿರಲು ಭೃಗುಮುನಿಗಳು ನಿನಗೆ ಪೂಜೆಯೇ ಇಲ್ಲದಿರಲೆಂದು ಶಪಿಸಿದರು.

ಭಗವಂತನು ಭಕ್ತವತ್ಸಲನೆಂಬ ನಿಲುವು ತಳೆದಾಗ ಭೃಗುವು ಹರಿಯ ಸರ್ವೋತ್ತಮತ್ವವನ್ನು ಕೊಂಡಾಡಿದ. ಶ್ರೇಷ್ಠತ್ವವು ಸಿದ್ಧಿಯಾದಾಗ ನಮ್ಮಲ್ಲಿರುವ ವಿನಯ ಸೌಜನ್ಯಗಳೇ ನಮ್ಮ ವ್ಯಕ್ತಿತ್ವದ ಸೌಂದರ್ಯವನ್ನು ವರ್ಧಿಸುತ್ತವೆ ಎಂಬುದು ಈ ಕಥೆಯ ನೀತಿ.

ಶ್ರೀ ಶ್ರೀಪಾದರಾಜರ ಕೃತಿಗಳೆಲ್ಲವೂ ಸರ್ವ ಸಮರ್ಪಣಾಭಾವದಿಂದ ಕೂಡಿವೆ. **ರಂಗವಿಠಲ**ನೇ ಒಡೆಯ ಎಂಬ ಸಂದೇಶವನ್ನು ಭೃಗು ಋಷಿಗಳ ನಿದರ್ಶನದ ಮೂಲಕ ತಿಳಿಸಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**

**ವಿಜಯದಾಸರು ಹೇಳಿದ ಕಥೆಗಳು**

## ಜ್ಞಾನತೀರ್ಥದಲ್ಲಿ ಸ್ನಾನ....

**ಇಳೆಯೊಳಗೆ ಕಪಿಲಾವತಾರನಾಗಿ ನಮ್ಮ**
**ಭಾರವಹಿಸುವಾ||**

**ವಿಜಯದಾಸರು ತಿಳಿಸುವ ಸ್ನಾನ ಯಾವುದು?**

ಮಾನವರೆಲ್ಲ ಮೌನದೊಳಗೆ ನಿಂದು ಮಾಡುವ ಸ್ನಾನ ಯಾವುದು?

ದೇವಹೂತಿಯು ತನ್ನ ಮಗನಾದ ಕಪಿಲನಾಮಕ ಭಗವಂತನಲ್ಲಿ ಜ್ಞಾನ, ಭಕ್ತಿ, ವೈರಾಗ್ಯವನ್ನು ಹೊಂದುವ ಮಾರ್ಗವನ್ನು ತಿಳಿಸೆಂದು ಕೇಳಿಕೊಳ್ಳುತ್ತಾಳೆ. ಪರಮಾತ್ಮ ತಾಯಿಗೆ ಉಪದೇಶ ನೀಡುತ್ತಾನೆ.

ಜನಸೇವೆಯ ಸೋಗಿನಲ್ಲಿ ಸ್ವಾರ್ಥಸಾಧನೆಯಲ್ಲಿ ತೊಡಗಿದರೆ ಅದು ಸೇವೆ ಎನಿಸದು. ಸೇವೆ ಇಲ್ಲದ ಭಕ್ತಿ, ಭಕ್ತಿಯಿಲ್ಲದ ಸೇವೆ ಎರಡೂ ಅಪೂರ್ಣ.

ಕಪಿಲ ನಾಮಕ ಪರಮಾತ್ಮನು ಸ್ನಾನವೆಂದರೇನೆಂದು ತಿಳಿಸುತ್ತಾನೆ. ಅನ್ಯಾಯ ಮಾಡದಿರುವುದೊಂದು ಸ್ನಾನ, ಅನ್ನದಾನ ಮಾಡುವುದೊಂದು ಸ್ನಾನ, ಪರನಿಂದೆ ಮಾಡದಿರುವುದೊಂದು ಸ್ನಾನ, ಸಾಧು ಸಜ್ಜನರ ಸಂಗವೆ ಒಂದು ಸ್ನಾನ, ಈ ಪರಿಯ ಜ್ಞಾನತೀರ್ಥದಲ್ಲಿ ಮಾನವರೆಲ್ಲರೂ ಮಾಡಬೇಕಾದ ಸ್ನಾನವನ್ನು ಭಗವತ್ಪೂಜೆಯೆಂಬ ಅನುಸಂಧಾನದಿಂದ ಮಾಡಿರೆಂದು ದಾಸರು ತಿಳಿಸಿದ್ದಾರೆ.

ತೃತೀಯಸ್ಕಂದ ಭಾಗವತದಲ್ಲಿ ಕಪಿಲಾವತಾರಿ ಪರಮಾತ್ಮನು ತನ್ನ ತಾಯಿ ದೇವಹೂತಿಗೆ ಉಪದೇಶಿಸಿದ ಭಾಗದಿಂದ ದಾಸರು ಈ ಸಂದೇಶವನ್ನು ನಮಗೆ ನೀಡಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**





### ವಿಚಾರ ಸಂಕಿರಣ

ಗೋವಿನ ದೇಹದಲ್ಲಿ ಎಲ್ಲ ತೀರ್ಥಾಭಿಮಾನಿದೇವತೆಗಳಿರುವುದರಿಂದ ಗೋವಿನಸ್ತೋತ್ರವು ಪುಣ್ಯಕರ

108 ಬಾರಿ ನಾರಾಯಣನ ಸ್ಮರಣೇಯನ್ನು ಮಾಡಬೇಕು. ಒಂದು ಬಾರಿ ನಾರಾಯಣನ ನಾಮದ ಸ್ಮರಣೆಯು 7 ಕೋಟಿ ಮಂತ್ರ ಜಪದ ಪುಣ್ಯವನ್ನು ನೀಡುತ್ತದೆ ಎಂದು ಶ್ರೀರಾಘವೇಂದ್ರ ಸ್ವಾಮಿಗಳು ಪ್ರಾತಃ ಸಂಕಲ್ಪ ಗದ್ಯದಲ್ಲಿ ಅಪ್ಪಣೆಕೊಡಿಸಿದ್ದಾರೆ. ನಾರಾಯಣ ಮಂತ್ರ ಜಪದಿಂದ ಅಪಾರ ಸಾಧನೆಯಾಗುವುದು.

**ಹರೇ ರಾಮ ಹರೇ ರಾಮ** ಮಂತ್ರವನ್ನು 16 ಬಾರಿ ಪಠಿಸಬೇಕು. ದಾಸರು ತಿಳಿಸಿದಂತೆ **ರಾಮ ಮಂತ್ರವ ಜಪಿಸು ಹೇ ಮನುಜ** ಎಂಬ ಕೀರ್ತನೆಯಲ್ಲಿ ಸೋಮಶೇಖರನೇ ಪಾರ್ವತಿಗೆ ಉಪದೇಶಿಸಿದ ರಾಮಮಂತ್ರದ ಮಹಿಮೆ ಅಪಾರ. ಕೃಷ್ಣಮಂತ್ರ ಜಪಿಸಿದಾಗ ಕಲಿಯುಗದಲ್ಲಿಯೇ ಚತುರ್ವಿಧ ಪುರುಷಾರ್ಥಗಳ ಸಾಧನೆಯಾಗುವುದು.

ಕೃಷ್ಣಸ್ಮರಣೆ ಮಾಡಿದನಂತರ ಗಜೇಂದ್ರಮೋಕ್ಷದ ಪಾರಾಯಣ ಮಾಡಬೇಕು. ಗಜೇಂದ್ರ ಮೋಕ್ಷದ ಪಾರಾಯಣದಿಂದ ಭಕವತ್ಸಲನಾದ ನಾರಾಯಣನು ವಿಷ್ಣು ಭಕ್ತನ ಪಾದವನ್ನೇ ಹಿಡಿದ ನಕ್ರನಿಗೆ ಮೊದಲು ಮೋಕ್ಷವನ್ನು ನೀಡಿ ಗಜೇಂದ್ರನಿಗೂ ಮುಕ್ತಿ ಕರುಣಿಸಿದ ಸಂದರ್ಭವನ್ನು ಭಾಗವತದಲ್ಲಿ ಮನೋಜ್ಞವಾಗಿ ವರ್ಣಿತವಾಗಿದೆ. ನಂತರ ಪಠಿಸುವ ಮಂಗಳಾಷ್ಟಕವು ಮುಕ್ತಿಪ್ರದವಾಗಿದೆ. ಭಗವಂತನಿಗೆ ನಮನಗಳನ್ನು ಮಾಡಿ ಲಕ್ಷ್ಮೀದೇವಿಯಾದಿಯಾಗಿ ಎಲ್ಲ ದೇವತಾ ಸ್ತೋತ್ರಗಳನ್ನು ಪಠಿಸಿ ತತ್ವಾಭಿಮಾನಿ ದೇವತೆಗಳಿಗೆ ನಮಿಸಿ ಗುರುಗಳ-ಆಚಾರ್ಯರ ಸ್ತೋತ್ರವನ್ನು ಹೇಳಬೇಕು.

**ವಿದ್ವಾನ್ ಶಂಕರನಾರಾಯಣ ಅಡಿಗರು**

### ಶ್ರದ್ಧಾಂಜಲಿ

ಪ್ರಖ್ಯಾತ ಸಾಹಿತಿಗಳು ಹಾಗೂ ದಾಸಸಾಹಿತ್ಯ ಸಂಶೋಧಕರು ಆದ **ಶ್ರೀನಿವಾಸ ಹಾವನೂರ ರವರು** ಇನ್ನಿಲ್ಲ. ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾದುದು. **ಸಮಗ್ರದಾಸ ಸಾಹಿತ್ಯ ಪರಿವಿಡಿಯನ್ನು** ನೀಡುವ ಮೂಲಕ **ರಂಗವಿಠಲಕ್ಕೆ** ಇವರ ಸಹಕಾರ ಸಲಹೆಗಳು ಅಪರಿಮಿತವಾದುದು. ಮುಂಬರುವ ಸಂಚಿಕೆಗಳಲ್ಲಿ ಇವರ ದಾಸಸಾಹಿತ್ಯ ಸೇವೆಯನ್ನು **ರಂಗವಿಠಲ** ಪ್ರತ್ಯೇಕವಾಗಿ ಸ್ಮರಿಸಲು ಆಶಿಸುತ್ತದೆ.

ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಸುಧಾಂತ ಅಧ್ಯಯನ ನಡೆಸಿ
ಜನಪ್ರಿಯ ಪ್ರವಚನ ಚತುರರಾದ ವಿದ್ವಾನ್ ಶಂಕರನಾರಾಯಣ ಅಡಿಗರು
ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಷಯ

## ಪ್ರಾತಃ ಸ್ತೋತ್ರಗಳು ವೈಜ್ಞಾನಿಕವೂ ಹೌದು

ಪ್ರಾತಃ ಸ್ತೋತ್ರವೆಂದರೆ, ಬ್ರಾಹ್ಮಿ ಮುಹೂರ್ತದಲ್ಲಿ ನಿದ್ರೆಯಿಂದ ಎದ್ದನಂತರ ಪ್ರಾತಃ ಸ್ನಾನದವರೆಗೆ ಪಠಿಸಬೇಕಾದ ಸ್ತೋತ್ರಗಳು - ಕರದರ್ಶನ, ಭೂ ಪ್ರಾರ್ಥನಾ, ವಿಷ್ಣ್ವಾದಿ ಪ್ರಾರ್ಥನಾ, ತುಳಸಿ ಪ್ರಾರ್ಥನಾ, ಗೋ ಪ್ರಾರ್ಥನಾ, ನಾರಾಯಣಸ್ಮರಣ, ಹರೇರಾಮಾ ಹರೇರಾಮ, ಕೃಷ್ಣಸ್ಮರಣ, ರಮೇಶಸ್ತುತಿ, ಗಜೇಂದ್ರ ಮೋಕ್ಷ ಸ್ತೋತ್ರ ಇತ್ಯಾದಿ.

**ದುರ್ಲಭಂ ಮಾನುಷಂ ಜನ್ಮ** ಎಂಬ ಸಂದೇಶದ ಎಚ್ಚರ ನಮಗಿರಬೇಕು. ಪ್ರಹ್ಲಾದರಾಜರೇ ಸೂಚಿಸಿದಂತೆ ಬಾಲ್ಯದಿಂದಲೇ ಕರ್ಮವನ್ನು ಆಚರಿಸಬೇಕು. ವೈಜ್ಞಾನಿಕವಾಗಿಯೂ ಬ್ರಾಹ್ಮ ಮುಹೂರ್ತ ಪ್ರಶಸ್ತವಾದುದು. ಯಾರು ಪ್ರಾತಃ ಸ್ತೋತ್ರಗಳನ್ನು ಬ್ರಾಹ್ಮಿಮುಹೂರ್ತದಲ್ಲಿ ಶ್ರದ್ಧೆಯಿಂದ ಪಠಿಸುತ್ತಾರೋ ಅವರ ಐಶ್ವರ್ಯ, ತೇಜಸ್ಸು, ಆಯುಸ್ಸು ವೃದ್ಧಿಯಾಗುವುದು.

**ಕರದರ್ಶನ!** ಪ್ರಾತರ್ವಿಧಿಗಳು ಶಾಸ್ತ್ರಾಧಾರಿತ. ಬ್ರಾಹ್ಮಿಮುಹೂರ್ತದಲ್ಲಿ ಹರಿಯ ಧ್ಯಾನದೊಡನೆಯೆ ಏಳಬೇಕು. ಏಳುತ್ತಲೆ **ಕರಾಗ್ರೇವಸತೇ ಲಕ್ಷ್ಮೀಕರಮಧ್ಯೆ ಸರಸ್ವತಿ ಕರಮೂಲೇತು ಗೋವಿಂದಂ ಪ್ರಭಾತೆ ಕರದರ್ಶನಂ** ಎಂಬ ಸ್ತೋತ್ರದಿಂದ ಪ್ರಾರಂಭಿಸಿ. ಅನ್ಯವಿಷಯಗಳನ್ನು ನೋಡುವ ಮುನ್ನ ಲಕ್ಷ್ಮೀ, ಸರಸ್ವತಿ ಮತ್ತು ಗೋವಿಂದನ ಧ್ಯಾನವಿರಬೇಕು.ಎರಡೂ ಹಸ್ತಗಳನ್ನು ಜೋಡಿಸಿ ನೋಡಿಕೊಳ್ಳಬೇಕು.ಹೀಗೆ ಮಾಡುವುದರಿಂದ ದಿನದ ಕಾರ್ಯಗಳೆಲ್ಲವೂ ಶುಭದಾಯಕವಾಗುವುದು.

**ಭೂಪ್ರಾರ್ಥನಾ:** ಭೂದೇವಿಯಲ್ಲಿ ಕ್ಷಮೆಯನ್ನು ಯಾಚಿಸಿ ಪ್ರಾರ್ಥಿಸುವುದು ಅತಿ ಮುಖ್ಯವಾದುದು. ನಿತ್ಯದಲ್ಲಿಯೂ ನಾವು ನಮ್ಮ ಪಾದಗಳಿಂದ ಭೂತಾಯಿಯನ್ನು ತುಳಿಯುತ್ತೇವೆ ಮತ್ತು ಹೇಸಿಗೆಯನ್ನು ಮಾಡುತ್ತೇವೆ. ನಮ್ಮ ತಪ್ಪುಗಳನ್ನು ಕ್ಷಮಿಸಿ ನಮ್ಮನ್ನು ಹೊರುತ್ತಾಳಾದ್ದರಿಂದ ಅವಳಲ್ಲಿ ಕ್ಷಮೆಯನ್ನು ಬೇಡುವುದು ಅತಿ ಮುಖ್ಯವಾದುದು.

**ವಿಷ್ಣ್ವಾದಿಪ್ರಾರ್ಥನ:** ತತ್ವಾಭಿಮಾನಿ ದೇವತೆಗಳನ್ನು ಮೊದಲುಮಾಡಿಕೊಂಡು ವಿಷ್ಣು ಪರ್ಯಂತ ಎಲ್ಲರನ್ನು ಸ್ತೋತ್ರ ಮಾಡುವುದು. ಎಲ್ಲ ಕಾರ್ಯಗಳು ನಿನ್ನ ಪ್ರೇರಣೆಯಿಂದ ಮಾಡುವೆ ನನ್ನನ್ನು ಧರ್ಮಮಾರ್ಗದಲ್ಲಿ ಪ್ರೇರೇಪಿಸು ಎಂದು ಕೇಳಿಕೊಳ್ಳಬೇಕು.

ತುಳಸಿಯ ದರ್ಶನ ಧಾರಣಾದಿಗಳು ಸರ್ವಪಾಪನಾಶಕವೆಂದು ಸ್ತೋತ್ರಮಾಡುತ್ತ ದರ್ಶನ ಮಾಡಬೇಕು.





ನಾಲ್ಕೂ ವೇದಗಳ ಪಂಡಿತರು, ವ್ಯಾಸ-ದಾಸಸಾಹಿತ್ಯದ ಲೇಖಕರು,
ಮುಂಡಿಗೆಗಳನ್ನು ಬಿಡಿಸುವಲ್ಲಿ ಪರಿಣಿತರಾದ ವಿದ್ವಾನ್
ಡಾ|| ಚತುರ್ವೇದಿ ಎಸ್. ವೇದವ್ಯಾಸಾಚಾರ್ಯರ ಲೇಖನ

## ನಮಸ್ಕಾರ

ಶರಣಾಗತಿಯ ಮೊದಲ ಹಂತ ನಮಸ್ಕಾರ. ಭಗವಂತನಿಗೆ ಕೃತಜ್ಞತೆಯನ್ನು ತೋರಲು ಉತ್ತಮ ಮಾರ್ಗ. ನಮಸ್ಕಾರವೆಂದರೆ **ನಾಹಂ ಕರ್ತಾಹರಿಃ ಕರ್ತಾ** ಎಂಬ ಭಾವನೆಯು. **ಅಪರಾಧ ಸಹಸ್ರಾಣಿಕ್ಷೀಯಂತೆ ಅಹರ್ನಿಶಂಮಯ** ಎಂದರೆ ಎಲ್ಲ ಅಪರಾಧಗಳನ್ನು ಕ್ಷೀಣವನ್ನಾಗಿಸುವ ದೇವ ಎಂದು ಅರ್ಥ.

ನಮಸ್ಕಾರವು ಪಾದಗಳಿಗೆ ಮಾಡುವ ಒಂದು ಕ್ರಿಯೆ. ಪಾದಗಳು ಸರ್ವೋತ್ಕೃಷ್ಟವಾದುವು. ಪರಮಾತ್ಮನ ಸ್ಮರಣೆ ಪಾದದಿಂದಲೇ ಪ್ರಾರಂಭಿಸಬೇಕು. ಪಾದವು ಭೂಮಿಯನ್ನು ನೇರವಾಗಿ ಸ್ಪರ್ಶಿಸುತ್ತದೆ. ಮತ್ತು ಅವು ದೇಹದ ಸರ್ವೇಂದ್ರಿಯಗಳನ್ನು ಹೊತ್ತಿವೆ. ಅವುಗಳಿಗೆ ನಮಸ್ಕರಿಸುವುದರಿಂದ ಸರ್ವಾಂಗಗಳಿಗೂ ಸೇರುತ್ತದೆಂಬ ಭಾವನೆ. ನಮಸ್ಕಾರ ಮಾಡುವವನು ತನ್ನ ಸರ್ವಾಂಗಗಳನ್ನು ಹಿಡಿತದಲ್ಲಿಟ್ಟುಕೊಂಡು ನಮಸ್ಕಾರ ಮಾಡುತ್ತಾನೆ ಹಾಗೂ ಸರ್ವಾಂಗಗಳೂ ಪರಮಾತ್ಮನ ಸೇವೆಗೆ ಸಮರ್ಪಣಾ ಭಾವದಿಂದಿರುತ್ತದೆ.

**ದೇಹವು ನಿನ್ನದೆ ಸ್ವಾಮಿ,** ನನ್ನದಲ್ಲ ಎಂಬ ಅನುಸಂಧಾನದಿಂದ ಮಾಡುವುದೆ ನಮಸ್ಕಾರ. ಧ್ಯಾನಸಕ್ತರಿಗೆ ನಮಸ್ಕಾರದ ಅಪೇಕ್ಷೆಯಿರುವುದಿಲ್ಲ.

ಧ್ಯಾನದಲ್ಲಿ ಕುಳಿತಾಗ ಸರ್ವೇಂದ್ರಿಯಗಳು ಕೇಂದ್ರಿಕೃತವಾಗುತ್ತವೆ. ಹಾಗೆ ಆದಲ್ಲಿ ಮಾತ್ರ ಧ್ಯಾನದ ಮಹತ್ವವು ಉಂಟಾಗುವುದು. ಆ ಅವಸ್ಥೆಯನ್ನು ಸಾಧಿಸಲು ಐದು ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಬಾಯಿ, ಮೂಗು ಮತ್ತು ಮನಸ್ಸುಗಳು ಏಕೀಕರಣವನ್ನು ಹೊಂದಬೇಕು. ಇವುಗಳ ಸಾಧನೆಯು ಮುಖ್ಯತಃ ಕಣ್ಣು, ಕಿವಿ, ಮೂಗು ಇವು ಮೂರು ಏಕತ್ರ ಮಿಳಿತವಾದಾಗ ಮಾತ್ರ ಧ್ಯಾನವು ಸಮನಾಗುವುದು ಎಂಬ ವಿಷಯವನ್ನು ತಿಳಿಸುತ್ತಾರೆ.

ನಮಸ್ಕಾರ, ಚಿಕ್ಕವರು ದೊಡ್ಡವರಿಗೆ ಸಲ್ಲಿಸುವ ಗೌರವ. ಆಚಾರದಲ್ಲಿ ಪ್ರಥಮವಾದದ್ದು ನಮಸ್ಕಾರ. ನಮಸ್ಕಾರ ಮತ್ತು ಸರ್ವಕರ್ಮ ಸಮರ್ಪಣಾ ಭಾವವು ಮೋಕ್ಷವನ್ನು ಹೊಂದಲು ಪ್ರಧಾನ ಮಾರ್ಗಗಳಾಗಿವೆ

**ವಿಳಾಸ: ನಂ.184, ಭಾಗವತ ಮಂದಿರಂ, 22ನೇ ಮುಖ್ಯರಸ್ತೆ, ಪದ್ಮನಾಭನಗರ, ಬೆಂಗಳೂರ-70.**

## ಶ್ರೀ ಶ್ರೀಪಾದರಾಜರ ಕೃತಿಗಳ ಹಾಗೂ ಸಾದೃಶ್ಯಕೃತಿಗಳ ಅಧ್ಯಯನ

ಹರಿದಾಸಸಾಹಿತ್ಯದ ಮೌಲ್ಯಗಳನ್ನು ಯುವಜನರಿಗೆ ಮನಹಿಡಿಸುವಂತೆ ವಿವರಿಸುವ ಜ್ಞಾನಯಜ್ಞ ನಡೆಸುತ್ತಿರುವ **ಪ್ರೊ|| ಮಾನಕರಿ ಶ್ರೀನಿವಾಸಾಚಾರ್ಯ** ರವರ ಲೇಖನ.

### ಭಾಗವತ ಪ್ರತಿಪಾದ್ಯವಾದ ಕೃತಿ

ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಪುರಂದರರು ಹಾಗೂ ಹರಿದಾಸರೆಲ್ಲರೂ ಭಾಗವತದ ವಿಷಯಗಳನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದಾರೆ.

ಕಥೆ, ಪಾತ್ರ, ಪ್ರಸಂಗಗಳ ನೇರ ಪ್ರಸ್ತಾಪದಲ್ಲಿ ಅಲ್ಲಿಯ ತತ್ವವನ್ನೋ ಮೌಲ್ಯವನ್ನೋ ಹೇಳುವ ಹಾಡುಗಳ ಸ್ವರೂಪವನ್ನು ತಿಳಿಯಬೇಕು. ಅನೇಕ ವೇಳೆ ಸಾಮಾನ್ಯ ಓದುಗರು ಇವುಗಳನ್ನು ದಾಸರ ಆಶುರಚನೆಗಳೆಂದು, ಅಲ್ಲಿಯ ಮಾತುಗಳನ್ನು ಅವರ ಸ್ವಂತ ಅಭಿಪ್ರಾಯಗಳೆಂದು ಭಾವಿಸುವ ಸಂದರ್ಭಗಳಿವೆ. ಆದರೆ ಭಾಗವತವನ್ನು ಬಲ್ಲ ವಿದ್ವಾಂಸರು ಇಂತಹ ಕೀರ್ತನೆಗಳಿಗೆ ಆಕರಗಳಾದ ಶ್ಲೋಕಗಳನ್ನು ತಟ್ಟನೆ ಗುರುತಿಸಿ ಹೇಳಬಲ್ಲರು. ಉದಾಹರಣೆಗೆ ಭಕ್ತಿತತ್ವ ಪ್ರತಿಪಾದನೆಯ ಸಂದರ್ಭವನ್ನು ಗಮನಿಸಬಹುದು.

**ನೋಡುವುದೇ ಕಣ್ಣು ಕೇಳುವುದೇ ಕಿವಿ|** ಎಂಬ ಪುರಂದರದಾಸರ ಈ ಸಾಲುಗಳು ನಮಗೆ ನೇರವಾಗಿ ಅರ್ಥವಾಗುತ್ತವೆ. ಭಕ್ತನ ಇಂದ್ರಿಯಗಳು ಭಗವಂತನ ಸೇವೆಗೆ ಬಳಕೆಯಾದಲ್ಲಿ ಸಾರ್ಥಕ ಎಂಬ ಭಾವವು ಸುಲಭವಾಗಿ ಸಂವಹನಗೊಳ್ಳುತ್ತದೆ. ಇಲ್ಲಿಯ ಅಚ್ಚಗನ್ನಡ ಭಾಷೆ ಹಾಗೂ ಹಾಡಿನ ಪರಿಚಿತ ಲಯಗಳು ನಮ್ಮನ್ನು ಆವರಿಸಿನಿಂತಾಗ ಈ ಪದ್ಯ ಪದಗಳಿಗೆ ಒಂದು ಸಂಸ್ಕೃತ ಮೂಲವಿರಬಹುದೆಂದು ಯೋಚಿಸುವ ಕಡೆ ನಮ್ಮ ಗಮನ ಹರಿಯುವುದಿಲ್ಲ.

ಆದರೆ ಶ್ರೀಮದ್ಭಾಗವತವನ್ನು ಚೆನ್ನಾಗಿ ತಿಳಿದ ವಿದ್ವಾಂಸರಿಗೆ **ನೋಡುವುದೇ ಕಣ್ಣು** ಎಂದೊಡನೆ ತದೇವ **ಯತ್ ಪಶ್ಯತಿ ತದ್ಧಿ ಚಕ್ಷು:** ಎಂಬ ವಾಕ್ಯವೂ **ಕೇಳುವುದೇ ಕಿವಿ** ಎಂದೊಡನೆ **ಶೃಣೋತಿ ತತ್ಪುಣ್ಯ ಕಥಾ ಸ ಕರ್ಣಃ** ಎಂಬ ಮಾತು, **ಪಾಡುವುದೇ ವದನ** ಎಂದಾಗ **ಸವಾಕ್ ಯಯಾ ತಸ್ಯ ಗುಣಾನ್ ಗೃಣೇತ್** ಎಂಬ ನಿರೂಪಣೆಯೂ ತಟ್ಟನೆ ನೆನಪಿಗೆ ಬರುತ್ತದೆ. ಈ ರೀತಿಯ ತುಲನೆಯಿಂದ ಇಲ್ಲಿಯ ಒಂದೊಂದು ಮಾತುಗಳೂ ಭಾಗವತದ ಪರೀಕ್ಷಿತರಾಜರ ಅಭಿಪ್ರಾಯಗಳಿಗೆ ಅನುಸಾರಿಯಾಗಿವೆ ಎಂಬುದನ್ನು ನಿರ್ಧರಿಸಲು ಸಹಾಯಕವಾಗುತ್ತದೆ. **ರಂಗಯ್ಯನನ್ನು ನೋಡುವುದೇ ಕಣ್ಣು** ಎಂಬಲ್ಲಿನ ಅವಧಾರಣೆಗೂ ಮೂಲದ **ತದೇವ** ಎಂಬಲ್ಲಿನ ಅವಧಾರಣೆಯೇ ಕಾರಣವೆಂಬ ಸೂಕ್ಷ್ಮ ವಿಶ್ಲೇಷಣೆಯೂ ಸಾಧ್ಯವೆನಿಸುತ್ತದೆ. ಈ ಪರಿಯಲ್ಲಿ ವಿಶ್ಲೇಷಿಸಿದರೆ ಕೀರ್ತನೆಗಳು ಶಾಸ್ತ್ರ ಪುಂಜವಾಗುತ್ತವೆ.

**ವಿಳಾಸ : ನಂ. 79, ಹರಿದಾಸ ವಿದ್ಯಾನಿಲಯ, ಗಣೇಶ ಕಾಲೋನಿ, ಬಳ್ಳಾರಿ-583103.**



## ಸಮಕಾಲೀನ ಬದುಕಿನಲ್ಲಿ ಆಚಾರ-ವಿಚಾರಗಳ ವೈಜ್ಞಾನಿಕತೆ

ಶ್ರೀಪಾದರಾಜ ಮಠದ ಅಂಗ ಸಂಸ್ಥೆಯಾದ ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯವತಿಯಿಂದ ಸಮಕಾಲೀನ ಬದುಕಿನಲ್ಲಿ ಆಚಾರ-ವಿಚಾರಗಳ ಕುರಿತು ನಡೆಸಲು ಆಯೋಜಿಸಿದ **ವಿಚಾರ ಸಂಕಿರಣವು** ದಿನಾಂಕ 29-5-2010 ಶನಿವಾರದಂದು ಬೆಂಗಳೂರಿನ ಶ್ರೀಪಾದರಾಜಮಠದಲ್ಲಿ ನಡೆಯಿತು. ಬೆಳಿಗ್ಗೆ 10 ರಿಂದ ಮಧ್ಯಾನ್ಹ 1 ರವರೆಗೆ ಎರಡನೇ ವಿದ್ವತ್ ಸಭೆಯು **ಪ್ರಾತರ್ವಿಧಿಗಳು** ಎಂಬ ವಿಷಯವನ್ನು ವಿದ್ವಾಂಸರು ಚರ್ಚಿಸಿದರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರಲ್ಲಿ **ವಿದ್ವಾನ್ ಅಯಾಚಿತ ಧೀರೇಂದ್ರಾಚಾರ್ಯ**ರು ಸಭೆಯ ನಿರ್ವಾಹಕರಾಗಿದ್ದುದು ಸ್ವಾರಸ್ಯಕರವಾಗಿ ವಿಚಾರ ಸರಣಿ ಮಂಡನೆಗೆ ನಾಂದಿಯಾಯಿತು. ಉಭಯ ಶ್ರೀಪಾದರ ಅಧ್ಯಕ್ಷತೆಯಲ್ಲಿ ಪ್ರಾತರ್ವಿಧಿಗಳನ್ನು ಕುರಿತು ಇಂದಿನ ಯುವಜನಾಂಗ ಬಯಸುವಂತೆ ವೈಜ್ಞಾನಿಕ ದೃಷ್ಟಿಕೋನದ ಮಹತ್ವವನ್ನು ವಿವಿಧ ವಿದ್ವಾಂಸರು ಮಂಡಿಸಿದರು.

ವಿಚಾರ ಸಂಕಿರಣದ ಸಾರವನ್ನು **ರಂಗವಿಠಲ** ಪ್ರಕಟಪಡಿಸುತ್ತಲಿದೆ. ಈ ವೇದಿಕೆಯಲ್ಲಿ ಓದುಗ - ಲೇಖಕರು ತಮ್ಮ ಅನಿಸಿಕೆಗಳನ್ನು ತಿಳಿಸುವ ಮೂಲಕ ಅಥವಾ ತಮ್ಮಲ್ಲಿ ಕಾಡುತ್ತಿರುವ ಪ್ರಶ್ನೆಗಳನ್ನು ಬರೆದು ಕಳುಹಿಸುವ ಮೂಲಕ ಎಲ್ಲರೂ ಭಾಗವಹಿಸಲು ಮುಕ್ತಾವಕಾಶವಿರುತ್ತದೆ. ಆದ್ದರಿಂದ ಇಲ್ಲಿ ನೀಡಿರುವ ವಿಚಾರ ಸಂಕೀರ್ಣ ಸಾರ ವಿಷಯದ ಬಗ್ಗೆ ಹೆಚ್ಚು ಹೆಚ್ಚು ಯುವಕರು ಉಪಕೃತರಾಗಲಿ ಎಂಬುದು **ರಂಗವಿಠಲ**ನ ಆಶಯ.

**ಸಂಪಾದಕೀಯ**

ಶ್ರುತಿಯಲ್ಲಿ ಮಾಹಿತಿ ತಂತ್ರಜ್ಞಾನ ನಿಪುಣೆ ಹರಿದಾಸ ಸಾಹಿತ್ಯ ಅಧ್ಯಯನ ನಿರತ ಶ್ರೀಮತಿ ಶ್ರೀ ಲಕ್ಷ್ಮೀಪ್ರಸಾದ್ ಅವರ ಲೇಖನ.

## ಭಕ್ತಿಭಾವದ ಸೆಲೆಯಲ್ಲಿ ಬದುಕಿನ ತತ್ವಸಿರಿ.....

**ಗಾತ್ರವೇ ಮಂದಿರ ಹೃದಯವೇ ಮಂಟಪ**
**ನೇತ್ರವೇ ಮಹದೀಪ ಹಸ್ತಚಾಮರವು।**
**ಎನ್ನಲ್ಲಿ ಭರಿತ ಸಾಧನಗಳು ಇರಲಾಗಿ**
**ಚೆನ್ನಾಗಿ ಶ್ರೀಕೃಷ್ಣಸ್ವಾಮಿಯ ಪೂಜಿಪೆ॥**

ವ್ಯಾಸರಾಜರ ಕೃತಿಯ ಅರ್ಥದಲ್ಲಿ ಭಕ್ತಿಭಾವದ ಸೆಲೆಯಿಂದ ಅಧ್ಯಾತ್ಮ ಬದುಕಿನ ಹೊನಲೇ ಇದೆ. ಸಿರಿಕೃಷ್ಣನ ಅಪ್ಪಣೆ ಮೇರೆಗೆ ರಚಿಸಿದ ಕೀರ್ತನೆಯಿದು.

ನಮ್ಮ ಶರೀರವೇ ದೇವ ಮಂದಿರವಾಗಿ, ಹೃದಯವೇ ಪೂಜಾ ಮಂಟಪವೆನಿಸಿ, ಕಣ್ಣುಗಳೆ ದೀಪವಾಗಿ, ಕೈಗಳೇ ಚಾಮರವಾಗಿರುವಾಗ ಚೆನ್ನಾಗಿ ಭಗವಂತನನ್ನು ಪೂಜೆ ಮಾಡಬೇಕು. ನಮ್ಮಲ್ಲಿ ಹುದುಗಿರುವ ಇಂದ್ರಿಯಾದಿ ಸಕಲ ಸಂಪತ್ತುಗಳೂ ಅವನ ಪೂಜಾ ಸಾಧನೆಗಳು. ಪಾಂಚಭೌತಿಕವಾದ ಈ ಶರೀರ ಪಂಚಕೋಶಮಯವಾಗಿದೆ. ಅವುಗಳು **ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ,** ಮತ್ತು **ಆನಂದಮಯ** ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮಗಳೇ ಪಂಚಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೇ ಐದು ಕರ್ಮೇಂದ್ರಿಯಗಳು.

ಈ ಇಂದ್ರಿಯಗಳಿಗೆ ವಿಷಯವಾಗುವ ತನ್ಮಾತ್ರೆಗಳೂ ಐದು. ರೂಪ, ಶಬ್ದ, ಗಂಧ, ರಸ, ಮತ್ತು ಸ್ಪರ್ಶ. ಈ ಎಲ್ಲ ವಿಷಯಗಳನ್ನು ಗ್ರಹಿಸುವ ಅಂತಃಕರಣವೂ ಪಂಚವಿಧ - ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಚೇತನಾ

ದೇಹದಲ್ಲಿ ಉಸಿರು ತುಂಬುವ, ಉಂಡದ್ದನ್ನು ಕರಗಿಸುವ ಪ್ರಾಣಾಗ್ನಿಗಳು ಪಂಚವಿಧ, ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ. ವಿಶ್ವವೇ ಪಂಚಭೂತಗಳಾದ ಭೂಮಿ, ನೀರು, ಬೆಂಕಿ, ಗಾಳಿ ಮತ್ತು ಆಕಾಶ. ಹೀಗೆ ವ್ಯಾಸರಾಜರು ಬಳಸಿದ ಮಾತು ಅಧ್ಯಾತ್ಮ ಸಿರಿಯ ರಹಸ್ಯಗಳಾಗಿವೆ. ಪುರಂದರದಾಸರ ಮತ್ತೊಂದು ನುಡಿಯಲ್ಲಿ-

**ನಿಂದದ್ದೇ ಗಯಾ ವಾರಣಾಸೀ ಕುರುಕ್ಷೇತ್ರ**
**ನುಡಿದದ್ದು ಎಲ್ಲವೂ ಗಾಯತ್ರಿ ಮಂತ್ರ-**

ಹೀಗೆ ಶ್ರೀಪಾದರಾಜರು, ವ್ಯಾಸರಾಜರು, ಪುರಂದರದಾಸರು, ಕನಕದಾಸರು -ಎಲ್ಲ ಹರಿದಾಸರು ಇತ್ತ ಭಾವದ ಸೆಲೆಯಲ್ಲಿ ತತ್ವಜ್ಞಾನದ ಅಮೃತಧಾರೆಯೇ ಹರಿದು ಬಂದಿದೆ.

**ವಿಳಾಸ: ಟಾಟಾಸಿಲ್ಕ್ ಫಾರಂ, ಬಸವನಗುಡಿ, ಬೆಂಗಳೂರು-4**





**ಸುಮಾರು ಮೂವತ್ತೈದು ವರ್ಷಕಾಲ ಎಜಿ ಕಛೇರಿಯಲ್ಲಿ ಸೀನಿಯರ್ ಆಡಿಟರ್ ಹುದ್ದೆಯಲ್ಲಿದ್ದು ನಿವೃತ್ತರಾಗಿ ಶ್ರೀಹರಿಸೇವೆ ಸಲ್ಲಿಸುತ್ತಿರುವ ಶ್ರೀಭಕ್ತರಹಳ್ಳಿ ರಾಘವೇಂದ್ರರಾಯರ ಸಂಗ್ರಹ**

## ಯಾತ್ರೆ - ಪ್ರದಕ್ಷಿಣೆ - ಶಯನ - ನಮಸ್ಕಾರ

ಶ್ರೀವ್ಯಾಸರಾಜರು ತಮ್ಮ ದೈನಂದಿಕಾರ್ಯಗಳೆಲ್ಲ ಬಿಂಬ ಮೂರುತಿಗೆ **ಅರ್ಪಿಸುವ ಪೂಜೆ** ಎಂಬ ಅನುಸಂಧಾನದಿಂದ ಜೀವಿಸಿದವರು. ಈ ಸಾಲಿನಲ್ಲಿ **ಪ್ರದಕ್ಷಿಣೆ** ಮತ್ತು **ನಮಸ್ಕಾರ** ಎಂಬ ಎರಡು ಕ್ರಿಯೆಗಳನ್ನು ತಿಳಿಸಿದ್ದಾರೆ.

**ಪ್ರದಕ್ಷಿಣೆ** ಎಂಬ ಪದವು ನಾಲ್ಕು ಅಕ್ಷರವುಳ್ಳದ್ದು. **ಪ್ರ+ದ** ಅಕ್ಷರವು ಸಾಂಸಾರಿಕ ಭಯವನ್ನು ನಾಶಪಡಿಸಿ ಮೋಕ್ಷವನ್ನು ನೀಡುತ್ತದೆ. **ಕ್ಷ** ಕಾರವು ರೋಗವನ್ನು ಪರಿಹರಿಸುತ್ತದೆ. **ಣ** ಕಾರದಿಂದ ಸಂಪತ್ತು ಅಭಿವೃದ್ಧಿಯಾಗುತ್ತದೆ. **ಪ್ರದಕ್ಷಿಣೆಗೆ** ಭಕ್ತಿ ಶ್ರದ್ಧೆಯು ಫಲ ನೀಡುತ್ತದೆ. ಸರ್ವಪಾಪಗಳ ಪರಿಹಾರವು ಪ್ರದಕ್ಷಿಣೆಯಿಂದ ಸಾಧ್ಯ. ಯಾತ್ರೆಯೂ ಒಂದು ಪ್ರದಕ್ಷಿಣೆಯಾಗಿದೆ.

**ಪೃಥವೀ ಪ್ರದಕ್ಷಿಣ ಫಲಂತೇನ ಪ್ರಾಪ್ಯ ಹರಿಂವ್ರಜೇತ್।**

ಭಗವಂತನ ಮಂದಿರಕ್ಕೆ ಪ್ರದಕ್ಷಿಣೆಯು ಪೃಥ್ವಿಗೆ ಪ್ರದಕ್ಷಿಣೆ ಮಾಡಿದಷ್ಟು ಹಾಗೂ ವೇದಪಾರಂಗತ ವಿಪ್ರನಿಗೆ ಭೂದಾನಮಾಡಿದ ಫಲವು ಲಭಿಸುವುದು. ಪ್ರದಕ್ಷಿಣೆಗೆ ಶ್ರೇಷ್ಠವಾದ ಕಾಲವೆಂದರೆ ಪ್ರಾತಃ ಸಾಯಂಕಾಲಗಳು. ಈ ಸಮಯದಲ್ಲಿ ಚಿತ್ತದ ಸ್ವಾಸ್ಥ್ಯವು ಹಿಡಿತದಲ್ಲಿರುತ್ತದೆ ಮತ್ತು ಹವಾಮಾನವು ಹೆಚ್ಚು ಹೆಚ್ಚು ಪ್ರದಕ್ಷಿಣೆಯನ್ನು ಮಾಡಲು ಅನುಕೂಲವಾಗುತ್ತದೆ.

ಪ್ರದಕ್ಷಿಣೆ ಹಾಕುವುದರಿಂದ ವೈಜ್ಞಾನಿಕವಾಗಿ ದೇಹಕ್ಕೆ ಬೇಕಾದಷ್ಟು ವ್ಯಾಯಾಮ ಸಿಗುತ್ತದೆ. ದೇವಸ್ಥಾನಗಳಲ್ಲಿ ಒಳ್ಳೆಯ ಹವಾಮಾನವಿರುತ್ತದೆ ಮತ್ತು ಅಲ್ಲಿ ದೊರೆಯುವ ಕಂಪನಗಳು ಮಾನಸಿಕ ಹಾಗೂ ದೈಹಿಕವಾಗಿ ಉತ್ತಮ ದೇಹ ನಿರ್ಮಾಣವಾಗಲು ಕಾರಣವಾಗುತ್ತವೆ. ಹರಿದಾಸರುಗಳ **ಯಾಯಿವಾರ** ಕ್ರಮವೂ ಒಂದು ಪ್ರದಕ್ಷಿಣೆಯೆಂಬುದು ದಾಸರ ಭಾವನೆ. ಗ್ರಾಮ ಪ್ರದಕ್ಷಿಣೆ ಮಾಡುವಾಗ ಗ್ರಾಮದೇವತೆಯ ಸ್ಮರಣೆ ಮತ್ತು ವಿಶೇಷವಾಗಿ ಆ ಗ್ರಾಮದಲ್ಲಿ ಆರಾಧಿಸಲ್ಪಡುವ ಭಗವಂತನಿಗೆ ಪ್ರದಕ್ಷಿಣೆಯೆಂಬ ಉತ್ಕಟ ಅಪೇಕ್ಷೆಯನ್ನು ಹರಿದಾಸರುಗಳು ಹೊಂದಿರುತ್ತಾರೆ. ಇದೇ ರೀತಿ ಕೆಲವು ಸಲ ಕೆಲವೊಂದು ಮನೆಗಳಿಗೂ ಪ್ರದಕ್ಷಿಣೆ ಮಾಡುವ ಪರಿಪಾಠವು ಹರಿದಾಸರಲ್ಲುಂಟು.

**(ಆಧಾರ: ನಮಸ್ಕಾರ-ಪ್ರದಕ್ಷಿಣೆ, ವಿದ್ವಾನ್ ಚತುರ್ವೇದಿ ಎಸ್. ವೇದವ್ಯಾಸಾಚಾರ್ಯ)**

**ವಿಳಾಸ: ನಂ. 1249, 2ನೇ ಹಂತ, 10ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-86.**

## ಶ್ರೀವ್ಯಾಸರಾಜರ ಕೃತಿ

ಎನ್ನ ಬಿಂಬ ಮೂರುತಿಯ ಪೂಜಿಪೆ ನಾನು
ಮನಮುಟ್ಟಿ ಅನುದಿನ ಮರೆಯದೆ ಮರೆಯದೆ ॥ ಪ॥

ಗಾತ್ರವೆ ಮಂದಿರ ಹೃದಯವೆ ಮಂಟಪ
ನೇತ್ರವೆ ಮಹದೀಪ ಹಸ್ತ ಚಾಮರವು
ಯಾತ್ರೆ ಪ್ರದಕ್ಷಿಣೆ ಶಯನ ನಮಸ್ಕಾರ
ಶಾಸ್ತ್ರ ಮಾತುಗಳೆಲ್ಲ ಮಂತ್ರಂಗಳು ॥ 1॥

ನುಡಿವ ಶಬ್ದಗಳೆಲ್ಲ ಹೂವುಗಳಾಯಿತು
ನಡೆವುದೆಲ್ಲವು ಬಹು ನಾಟ್ಯಂಗಳು
ಉಡುವ ಹೊದಿಕೆಯೆಲ್ಲ ಉಚಿತವಾದ ವಸ್ತ್ರ
ತೊಡುವ ಭೂಷಣವೆಲ್ಲ ದಿವ್ಯಾಭರಣ ॥ 2॥

ಧರಿಸಿದ ಗಂಧವೆ ಚರಣಕ್ಕೆ ಗಂಧವು
ಶಿರದಲ್ಲಿ ಮುಡಿಯುವ ಪುಷ್ಪವೆ ಮಾಲೆ
ಸ್ಥಿರವಾಗಿ ಕೂಡಿದ ಬುದ್ಧಿಯೆ ಆರುತಿ
ಅರಿತೊಡಲಿಗೆ ಉಂಬನ್ನವೆ ನೈವೇದ್ಯ ॥ 3॥

ಎನ್ನ ಸ್ವರೂಪವೆಂಬುದೆ ರನ್ನಗನ್ನಡಿ
ಎನ್ನ ಮನೋವೃತ್ತಿ ಎಂಬುದೆ ಛತ್ರ
ಇನ್ನು ನುಡಿವ ಹರಿ ನಾಮಮೃತವೇ ತೀರ್ಥ
ಎನ್ನ ಮನವೆಂಬುದೆ ದಿವ್ಯ ಸಿಂಹಾಸನ ॥ 4॥

ಅನ್ಯ ದೇವತೆ ಯಾಕೆ ಅನ್ಯ ಪ್ರತಿಮೆಯು ಯಾಕೆ
ಅನ್ಯವಾದ ಮಂತ್ರ ತಂತ್ರವ್ಯಾಕೆ
ಎನ್ನಲ್ಲಿ ಭರಿತ ಸಾಧನ್ನಂಗಳಿರುತಿರೆ
ಚೆನ್ನಾಗಿ ಶ್ರೀಕೃಷ್ಣ ಸ್ವಾಮಿಯ ಪೂಜಿಪೆ ॥ 5॥

-ಸಮಗ್ರದಾಸಸಾಹಿತ್ಯ ಸಂಪುಟ-1 (ಪುಟ-222)





ದಾಸರ ಕೀರ್ತನೆಗಳ ಹಾಡುತಲಿ ಶ್ರೀನಿವಾಸ ಕಲ್ಯಾಣ ಹನುಮದ್ವಿಲಾಸ
ಮುಂತಾದ ರೂಪಕಗಳ ಪ್ರದರ್ಶಿಸುವ ಚತುರೆ
ಶ್ರೀಮತಿ ಸರೋಜ ಗೋಪೀನಾಥಾಚಾರ್ ಅವರಲೇಖನ.

## ನಿತ್ಯ ಮನನ ಮಾಡಿ ಸುಖಿಸುವ ಮನುಜರೇ ಧನ್ಯರು

**ಚಿತ್ತನಿನ್ನಲಿ ಕುಣಿದಾಡಲಿ।**
**ಎನ್ನ ಬುದ್ಧಿ ನಿನ್ನಲಿ ಸುಳಿದಾಡಲಿ ಹರಿಯೇ॥**

ರಂಗನ ಸಂದರ್ಶನದಲ್ಲಿ ಅಭಿವ್ಯಕ್ತಿಸಿದ ಮಂತ್ರತುಲ್ಯವಾದ ನುಡಿಮುತ್ತುಗಳೇ ಶ್ರೀಪಾದರಾಜರಿತ್ತ ಭಕ್ತಿರಸದ ಗಂಗೆ, ಸರ್ವಾಂಗ ಪ್ರೇರಕನಿಗೆ ಸರ್ವಾಂಗಗಳಲ್ಲಿಯೂ ಸಮರ್ಪಿಸುವ ಸರ್ವ ಸಮರ್ಪಣಾ ಕುಸುಮವಿದು.

ವ್ಯಾಸರಾಜರು ಗೀತಾಸಾರದಲ್ಲಿ ಹೇಳುವಂತೆ **ಶರೀರವೇ ಕ್ಷೇತ್ರವೆಂತೆಂದು ತಿಳಿಯೋ ಮರೆಯದೆ ಕ್ಷೇತ್ರಜ್ಞನೆಂದೆನ್ನ ತಿಳಿಯೋ**

ರಂಗನ ಕರುಣದಿಂದ ಒದಗಿದ ಶರೀರವೆನಿಸುವ ಮಹತ್ತತ್ವಾದಿಗಳೇ ಕ್ಷೇತ್ರವೆಂದು ತಿಳಿಯಬೇಕು. ಕ್ಷೇತ್ರವನ್ನು ಪ್ರೇರಿಸುತ್ತಾ ಅದನ್ನು ಚೆನ್ನಾಗಿ ಬಲ್ಲ ಕ್ಷೇತ್ರಜ್ಞ ಎಂದು ಭಗವಂತನನ್ನು ತಿಳಿಯಬೇಕು. ಯಾರ ಭಕ್ತಿಯು ರಂಗನ ಪಾದಕಮಲಗಳಲ್ಲಿಯೇ ನಿರತವಾಗಿದೆಯೋ ಅಂತಹವರಿಗೆ ಸಂಸಾರಯಾತನೆಯೆಲ್ಲಿದೆ? ಎಂಬ ಗೀತಾಸಾರವನ್ನೆ ಶ್ರೀಪಾದರಾಜರು ನಮಗೆ ಕರುಣಿಸಿದ ಅಂತರಂಗವಾಣಿ. ಗೀತಾಮಕರಂದವನ್ನೇ ರಂಗವಿಠಲದಾಸರಿತ್ತ ಭಕ್ತಿರಸಸಾಗರದ ಅಮೃತಬಿಂದುಗಳು. ಅವರ ಸರ್ವಸಮರ್ಪಣಾ ಸೇವೆಯಲ್ಲಿ ಅಭಿವ್ಯಕ್ತವಾದ ನುಡಿಮುತ್ತುಗಳ ಅನುದಿನದ ಅಧ್ಯಯನದಿಂದ ಆನಂದ ನಿಲಯಾಲಯನಾದ **ರಂಗವಿಠಲ**ದೇವರು ಪರಮಾನಂದವನ್ನೀವನು. ಅವರ ಕೃತಿಯ ಅರ್ಥಗಳನ್ನು ನಿತ್ಯವೂ ಮನನ ಮಾಡಬೇಕು. ಹೀಗೆ ಮನದೊಳಗೆ ನಿತ್ಯವೂ ಸುಖಿಸಬೇಕು. ಹಾಗೆ ಸುಖಿಸುವ ಸುಜೀವರೆಲ್ಲರೂ ಧನ್ಯರು ಸನ್ಮಾನ್ಯರು.

ಶಾಸ್ತ್ರಗರ್ಭಿತವಾದ ತತ್ವಸುಧೆಯನ್ನು ಅಭಿವ್ಯಕ್ತಿ ಪಡಿಸುವಲ್ಲಿ ದಾಸರ ಕೃತಿಗಳು ಯಶಸ್ವಿಯಾಗಿವೆ.

**ವಿಳಾಸ: ನಂ. 170, ಶ್ರೀಕೃಷ್ಣನಿಲಯ, 4ನೇ ಅಡ್ಡರಸ್ತೆ, ಕತ್ರಿಗುಪ್ಪೆ, ಬೆಂಗಳೂರು-85**

ಸೂತ್ರ ಗೊಂಬೆಯಾಟ ನಿಪುಣೆ ಹಾಗೂ ಹರಿದಾಸ ಸಾಹಿತ್ಯ
ಸಂಶೋಧನಾ ಕಾರ್ಯದಲ್ಲಿ ನಿರತರಾದ ಪತ್ರಕರ್ತೆ
ಶ್ರೀಮತಿ ಸುಧಾ ಜಯಸಿಂಹ ರವರ ಲೇಖನ

## ಹರಿಯ ಹಿರಿಮೆಯ ಅರಿವು, ಜೀವರ ಧನ್ಯತೆಯ ಇರಿವು...

**ಜನರೊಳಗೆ ನೀನಿದ್ದು ಜನ್ಮ ಜನ್ಮಗಳಲಿ**
**ಗುಣ ಕಾಲ ಕರ್ಮ ಸ್ವಭಾವಂಗಳ॥**
**ಜಗನ್ನಾಥ ವಿಠಲ ಜಯಪ್ರದನೆ ಜಗದೀಶಾ॥**

ಜಗನ್ನಾಥದಾಸರು ರಚಿಸಿದ ಕೃತಿಯ ನುಡಿಗಳಲ್ಲಿ ಜಗನ್ನಾಥನ ಹಿರಿಮೆಯ ಅರಿವಿದೆ. ನಮ್ಮ ಬಾಳಿನುದ್ದಕ್ಕೂ ಕರ್ಮದ ನಂಟು. ಜೀವನವೇ ಕರ್ಮಯೋಗದ ಕಮ್ಮಟಶಾಲೆ. ಕರ್ಮಾನುಷ್ಠಾನ, ವಿಧಿ-ವಿಧಾನಗಳು ಎಲ್ಲ ಜೀವರಿಗೂ ಮುಗಿಯದಷ್ಟು ಇವೆ. ಜನ್ಮ ಜನ್ಮಗಳಲ್ಲಿ ಯಾತ್ರಿಸುವ ಸರ್ವ ಜೀವರ ನಿಯಾಮಕನಾಗಿ ಅವರವರ ಯೋಗ್ಯತೆಗೆ ತಕ್ಕಂತೆ ಅವರವರ ಗತಿ ನೀಡಲೋಸುಗ ಭಗವಂತ ಮಾಡಿ-ಮಾಡಿಸುವ ನಿತ್ಯಾನುಷ್ಠಾನದಲ್ಲಿ ಜಗದೀಶನ ಸಾರ್ವಭೌಮತ್ವವನ್ನು ದಾಸರು ಕೊಂಡಾಡುತ್ತಾರೆ.

ಪುರುಸೊತ್ತಿಲ್ಲದ ಧಾವಂತದ ಇಂದಿನ ಕಾಲದಲ್ಲಿಯೂ ನಾವು ಗಮನಿಸಬೇಕಾದ ಅಂಶವೆಂದರೆ ಬೆಳಿಗ್ಗೆ ಹಾಸಿಗೆಯಿಂದೆದ್ದು ರಾತ್ರಿ ಮಲಗುವ ವರೆಗಿನ ಎಲ್ಲ ಕರ್ಮಾನುಷ್ಠಾನದಲ್ಲಿ ಸರ್ವಕರ್ಮ ಸಮರ್ಪಣಾ ಭಾವದ ಉಸಿರೇ ಇದೆ. ರಾತ್ರಿಯಿಂದ ಬೆಳಗಿನವರೆಗೂ ನಡೆಯುವ ನಿದ್ರಾದಿ ಎಲ್ಲ ಕಾರ್ಯಗಳೂ ಜಗನ್ನಿಯಾಮಕನಿಗೇ ಸಲ್ಲುವ ಪೂಜೆಯೆಂಬ ಧನ್ಯತೆಯಲ್ಲಿ ಜಗನ್ನಾಥನಿಗೇ ಶರಣಾಗುವ ಸಮರ್ಪಣಾ ಭಾವ ತುಂಬಿದೆ.

ಹೇಗಾದರೂ ಸರಿಯೆ ಹರಿಯ ಒಲುಮೆಗಾಗಿ ನಮ್ಮ ಸಾಧನೆಯೆಲ್ಲಾ ಎಂದು ತಿಳಿಯಬೇಕು. ಅವನನ್ನು ಒಲಿಸಬೇಕಾದರೆ ನಮ್ಮಲ್ಲಿ ಇದ್ದುದನ್ನೆಲ್ಲಾ ಅವನಿಗೆ ಒಪ್ಪಿಸಬೇಕು. ನಮ್ಮಲ್ಲಿ ಕೊಡಲಿಕ್ಕಾದರೂ ಏನಿದೆ? ಜಗದೀಶನ ಮುಂದೆ ನಮ್ಮದೆನ್ನುವ ಸಿರಿಯಾವುದಿದೆ?

ಈ ಪ್ರಪಂಚವೇ ಜಗನ್ನಾಥನ ಮನೆ. ಇಲ್ಲಿ ಇರುವುದೆಲ್ಲಾ ಅವನದೇ ಸಂಪತ್ತು ಅವನದಲ್ಲದ್ದು ನಮ್ಮಲ್ಲಿ ಯಾವುದೂ ಇಲ್ಲ. ಹಾಗಾದರೆ ಕೊಡುವುದಾದರೂ ಏನನ್ನು?

ಎಲ್ಲ ಹರಿದಾಸರ ಅನುಭೂತಿಯ ಮೂಸೆಯಲ್ಲಿ ಪಕ್ವವಾಗಿ ತೆರೆದುಕೊಳ್ಳುವ ಅರ್ಥದಲ್ಲಿ ಹರಿಯ ಹಿರಿಮೆಯನ್ನು ತಿಳಿಸುವ ತತ್ವಗಳಿವೆ. ಅಕ್ಷರದೊಳು ಆ ಕಾರ ವಾಚ್ಯನಾಗಿರುವ ಸರ್ವತ್ರ ವ್ಯಾಪ್ತ ಹರಿಯೇ ಎಲ್ಲವನ್ನು ಮಾಡುತ್ತಾನೆ. ಎಲ್ಲ ಕರ್ಮವೂ ಅವನ ಪೂಜೆ. ಎನ್ನ ಅಂತರಂಗದಲ್ಲಿ ಇರುವ ಹರಿಯ ಹಿರಿಮೆಯ ಕೊಂಡಾಡುತಲಿ **ಎನ್ನ ಅಂತರಂಗದಲ್ಲಿ** ಇರೋ ಎಂದು ದಾಸರೆಲ್ಲರೂ ಬೇಡಿಕೊಂಡಿರುತ್ತಾರೆ.

**ವಿಳಾಸ: 5ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**





ಭಾರತೀಯ ಸಂಸ್ಕೃತ ವಿದ್ಯಾಪೀಠದಲ್ಲಿ ಉಪನ್ಯಾಸಕರಾಗಿ
ನಿವೃತ್ತಿಯನ್ನು ಹೊಂದಿ ಸಂಶೋಧಕರಾಗಿರುವ
**ಅಯಾಚಿತ ಧೀರೇಂದ್ರಾಚಾರ್ಯರ** ಲೇಖನ

## ಎನ್ನ ಬಿಂಬ ಮೂರುತಿಯ ಪೂಜಿಪೆ ನಾನು

ಶ್ರೀವ್ಯಾಸರಾಜರ ಈ ಕೀರ್ತನೆಯಲ್ಲಿ ಶ್ರೀಪಾದರಾಜರಂತೆ ಸರ್ವಸಮರ್ಪಣಾ ಭಾವವನ್ನು ತುಂಬಿದ್ದಾರೆ. ಈ ಕೀರ್ತನೆಯಲ್ಲಿ ಒಂದೊಂದು ನುಡಿಯೂ ಒಂದೊಂದು ವಿಶೇಷತೆಯನ್ನು ತಿಳಿಸುತ್ತದೆ. ಬೇರೆ ಬೇರೆ ತತ್ವಗಳನ್ನು ಪ್ರತಿಪಾದಿಸುವಲ್ಲಿ ಸಮರ್ಥವಾಗಿದೆ.

ಹರಿದಾಸನು ತಾನು ಮಾಡುವ ಎಲ್ಲಾ ಕಾರ್ಯಗಳೂ ದೇವರ ಸೇವೆಯೆಂದು ತಿಳಿಯಬೇಕು ಎಂದು ಹೇಳಿದ್ದಾರೆ. ನಮ್ಮ ಅಂಗಗಳು ಒಂದೊಂದೂ ಪೂಜಾ ಸಾಮಗ್ರಿ ಎಂದು ತಿಳಿಸಿದ್ದಾರೆ. ನಮ್ಮ ದೇಹವು ಪರಮಾತ್ಮನ ಮಂದಿರ, ಹೃದಯವು ಅವನಿಗಾಗಿ ನಿರ್ಮಿಸಲ್ಪಟ್ಟ ಮಂಟಪ. ಕಣ್ಣುಗಳು ದೀಪ, ಕೈಗಳು ಚಾಮರ. ನಾವು ಮಾಡುವ ಯಾತ್ರೆಯೇ ಪ್ರದಕ್ಷಿಣೆ. ಶಯನವೇ ನಮಸ್ಕಾರವೆಂದು ತಿಳಿದರೆ, ಪರಮಾತ್ಮನ ಅನುಗ್ರಹವೆಂದೇ ತಿಳಿಯಬಹುದಾಗಿದೆ.

ಮಂದಿರದಲ್ಲಿ ಮಂತ್ರೋಚ್ಚಾರಣೆ, ವೇದಘೋಷಗಳಿಲ್ಲದಿದ್ದರೆ ಅಂತಹ ಮಂದಿರವು ನಿಷ್ಪ್ರಯೋಜಕ. ಇಂತಹ ಸನ್ನಿವೇಶವನ್ನು ಸರಿಪಡಿಸುವುದೆ ಶಾಸ್ತ್ರ ವಿಚಾರ, **ಭೂಷಣಕೆ ಭೂಷಣ ಇದು ಭೂಷಣ** ಎಂಬ ಕೃತಿಯಲ್ಲಿ ಶ್ರೀ ಶ್ರೀಪಾದರಾಜರು ಚರ್ಚೆ ಮುಂತಾದವುಗಳು ಮಂದಿರಕ್ಕೆ ಭೂಷಣ, ಹರಿಕಥೆಯನ್ನು ಕೇಳುವುದೇ ಕಿವಿಗಳಿಗೆ ಭೂಷಣ. ಮಾನವನ ಮನಸ್ಸು ಅತಿಸೂಕ್ಷ್ಮವಾದುದು. ಅವುಗಳು ಸ್ವಲ್ಪ ವಿಚಲಿತವಾದರೆ ಅಥವಾ ದುಷ್ಟ ವಾಕ್ಯಗಳನ್ನು ಮನನ ಮಾಡಿದರೆ ಬಲು ಬೇಗನೆ ಗ್ರಹಣ ಮಾಡುತ್ತದೆ. ಆದ್ದರಿಂದಲೆ ಶ್ರೀವ್ಯಾಸರಾಜರು ಕಿವಿಗಳು ಸದಾ ಶುದ್ಧ ವಿಷಯಗಳನ್ನು ಶ್ರವಣ ಮಾಡಬೇಕೆನ್ನುತ್ತಾರೆ.

**ಸಾಧನಕೆ ಬಗೆಗಾಣೆ ಎನ್ನಬಹುದೆ** ಎಂಬ ವಿಜಯದಾಸರ ಕೃತಿಯಲ್ಲಿ ಪರಮಾತ್ಮನು ನೀಡಿದ ಇಂದ್ರಿಯಗಳಷ್ಟೇ ಸಾಲದೆ ಸನ್ಮಾರ್ಗವನ್ನು ಹೊಂದಲು ಎಂದು ತಿಳಿಸಿದ್ದಾರೆ.

ಕಣ್ಣುಗಳು ದಾರಿ ದೀಪವಿದ್ದಂತೆ ಎನ್ನುವುದರಿಂದ, ದೀಪದಿಂದ ಮಾನವನು ಸರಿಯಾದ ಮಾರ್ಗದಲ್ಲಿ ನಡೆಯಲು ಅನುಕೂಲವಾಗುತ್ತದೆ. ಪಂಚಜ್ಞಾನೇಂದ್ರಿಯಗಳು ಮಾನವನಿಗೆ ಸಹಕಾರಿಯಾಗುತ್ತವೆ. ಎಲ್ಲಿಯವರೆಗೆಂದರೆ ಅವುಗಳನ್ನು ಪರಮಾತ್ಮನ ವಿಷಯಕವಾಗಿ ಚಿಂತಿಸುವವರೆಗೆ ಮಾತ್ರ, ಪರಮಾತ್ಮನ ಚಿಂತನೆಯು ತಪ್ಪಿದಾಗ, ದಾರಿ ತಪ್ಪುವುದು ಸಹಜವೇ ಸರಿ.

**ವಿಳಾಸ: ಸಂಸ್ಕೃತ ವಿದ್ವಾಂಸರು, ನಂ. 33, 12ನೇಮುಖ್ಯರಸ್ತೆ, ರಾಘವೇಂದ್ರಬಡಾವಣೆ, ಬೆಂಗಳೂರು.**

## ಬದುಕಿನ ಯಥಾವತ್ತಾದ ಪ್ರತಿಕೃತಿ

ಸಾಧನಕೆ ಬಗೆಗಾಣೆಯೆನ್ನಬಹುದೆ ॥ ಪ॥

ಸಾದರದಿ ಗುರುಕರುಣ ತಾ ಪಡೆದ ಬಳಿಕ ॥ ಅ.ಪ॥

ಕಂಡಕಂಡದ್ದೆಲ್ಲ ಕಮಲನಾಭನ ಮೂರ್ತಿ
ಉಂಡು ಉಟ್ಟಿದ್ದೆಲ್ಲ ವಿಷ್ಣುಪೂಜೆ
ತಂಡ ತಂಡದ ವಾರ್ತೆ ವಾರಿಜಾಕ್ಷನ ಕೀರ್ತಿ
ಹಿಂಡುಮಾತುಗಳೆಲ್ಲ ಹರಿನಾಮ ॥ 1॥

ವಾಗತ್ಯ ಪಡುವುದೆ ವಿಧಿನಿಷೇಧಾಚರಣೆ
ರೋಗಾನುಭವವೆಲ್ಲ ಉಗ್ರತಪವು
ಆಗದವರಾಡಿಕೊಂಬುವುದೆ ಆಶೀರ್ವಾದ
ಬೀಗರುಪಚಾರವೇ ಭೂತದಯವು ॥ 2॥

ಮೈ ಮರೆತು ಮಲಗುವುದೆ ಧರಣಿಗೆ ನಮಸ್ಕಾರ
ಕೈಮೀರಿ ಹೋದದ್ದೆ ಕೃಷ್ಣಾರ್ಪಣ
ಮೈಮನೋವೃತ್ತಿಗಳ ವಿಷಯದಲಿ ವೈರಾಗ್ಯ
ಹೊಯ್ಮಾಲಿತನವೆಲ್ಲ ಹರಿಯ ವಿಹಾರ ॥ 3॥

ಹಿಡಿದ ಹಠ ಪೂರೈಸಲದು ಹರಿಯ ಸಂಕಲ್ಪ
ನಡೆದಾಡುವುದೆಲ್ಲ ತೀರ್ಥಯಾತ್ರೆ
ಬಡತನವು ಬರಲದೇ ಭಗವದ್ಭಜನೆಯೋಗ
ಸಡಗರದಲಿಪ್ಪುದೆ ಶ್ರೀಶನಾಜ್ಞೆ ॥ 4॥

ಬುದ್ಧಿಸಾಲದೆ ಸುಮ್ಮನಿರುವುದೇ ಸಮ್ಮತವು
ಯದೃಚ್ಛಾಲಾಭವೇ ಸುಖವುಯೆನಲು
ಮಧ್ವಾಂತರ್ಗತ ಶ್ರೀ ವಿಜಯವಿಠಲರೇಯ
ಹೃದ್ಗತಾರ್ಥವ ತಿಳಿದು ಒಪ್ಪಿಸಿಕೊಳನೆ ॥ 5॥

-ಸಮಗ್ರದಾಸಸಾಹಿತ್ಯ ಸಂಪುಟ-9 (ಪುಟ-259)





ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಸೇವಾಕಾರ್ಯದಲ್ಲಿ ತೊಡಗಿರುವ ಹವ್ಯಾಸಿ **ಲೇಖಕ: ರಾಘವೇಂದ್ರ ಎಸ್. ಅಡಬಡ್ಡಿಯವರ** ಲೇಖನ.

## ಶ್ರೀ ಶ್ರೀಪಾದರಾಜರ ಸಿದ್ಧಾಂತದಲ್ಲಿ ಜ್ಞಾನ ಭಕ್ತಿಗಳ ಪ್ರತಿಪಾದನೆ

ಶ್ರೀ ಶ್ರೀಪಾದರಾಜರು ದಾಸಸಾಹಿತ್ಯಕ್ಕೆ ಅಮೂಲ್ಯವಾದ ಕೃತಿಗಳನ್ನು ನೀಡಿ ಪ್ರಾತಃಸ್ಮರಣೀಯರಾಗಿದ್ದಾರೆ. ಪ್ರಸ್ತುತ ನಿನ್ನ **ಪೂಜೆಯೋ - ರಾಮ** ಎಂಬ ಕೃತಿಯಲ್ಲಿ ದೈನಂದಿನ ಕ್ರಿಯೆಗಳಾದ ಸ್ನಾನ, ಸಂಧ್ಯಾವಂದನೆ, ಜಪ, ಯಜ್ಞಸಾಧನ, ಅಧ್ಯಯನ ನೈವೇದ್ಯ, ಭೋಜನ ಇತ್ಯಾದಿ ಕ್ರಿಯೆಗಳ **ತೇನವಿನಾ ತೃಣಮಪಿ ನ ಚಲತಿ** ಎಂಬಂತೆ ಭಗವಂತನ ವ್ಯಾಪಾರವಾಗಿವೆ ಎಂಬುದಾಗಿ ಪ್ರತಿಪಾದಿಸಿದ್ದಾರೆ.

ಈ ಕೃತಿಯನ್ನು ಹೋಲುವ ಶ್ರೀಪಾದರಾಜರ ಇನ್ನೊಂದು ಕೃತಿಯು ಹೀಗಿದೆ.

**ನಾ ನೀನಗೆನು ಬೇಡುವದಿಲ್ಲ ಎನ್ನ**
**ಹೃದಯ ಕಮಲದಲ್ಲಿ ನೆಲಸಿರು ಹರಿಯೇ ॥ ಪ॥**

ಸರ್ವ ನಿಯಾಮಕನಾದ ಶ್ರೀಹರಿ ಗೋವಿಂದನನ್ನು ತಮ್ಮ ಹೃದಯಕಮಲದಲ್ಲಿ ಸದಾ ನೆಲಸಿರುವಂತೆ ಪ್ರಾರ್ಥಿಸಿದ್ದಾರೆ. ಅದರಂತೆ ನಾವು ಕೂಡ ಭಗವಂತನಲ್ಲಿ ಐಹಿಕಾದಿ ಭೋಗ ಪ್ರದಾರ್ಥಗಳನ್ನು ಬೇಡದೆ ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ಮಾತ್ರ ಬೇಡಬೇಕು ಎಂಬುದಾಗಿ ಶ್ರೀಪಾದರಾಜರು ತಿಳಿಸಿದ್ದಾರೆ.

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಭಕ್ತಿಯ ಪ್ರತಿಪಾದನೆಯು ಹೀಗಿದೆ?

**ಪ್ರವರ್ಧತಾಂ ಭಕ್ತಿರಲಂ ಕ್ಷಣೇ ಕ್ಷಣೇ**
**ತ್ವಯೀಶ ಮೇ ಹ್ರಾಸವಿವರ್ಜಿತಾ ಸದಾ॥**

ರಾಮದೂತರಾದ ಶ್ರೀಹನುಮಂತದೇವರು ಭಗವಂತನಲ್ಲಿ ಪ್ರತಿ ಕ್ಷಣವೂ ಭಕ್ತಿಯ ವೃದ್ಧಿಯಾಗುತ್ತಿರಲಿ ಎಂಬುದಾಗಿ ಬೇಡಿದರಂತೆ.

ಶಾಸ್ತ್ರ ಜ್ಞಾನಗಳ ಸ್ಥಿರತೆಗಾಗಿ ಶ್ರೀ ಶ್ರೀಪಾದರಾಜರ ಸಂದೇಶವೇನು?

ಪ್ರತಿಯೊಬ್ಬರೂ ನಿತ್ಯದಲ್ಲಿ ಭಗವತ್ತತ್ವಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿರಬೇಕು. ಸರಿಯಾಗಿ ತಿಳಿದ ನಂತರ ಶಾಸ್ತ್ರ ಜ್ಞಾನವು ಸ್ಥಿರವಾಗಿ ಧ್ಯಾನಕ್ಕೆ ಅನುಕೂಲವಾಗುತ್ತದೆ. ಇಂಥ ಧ್ಯಾನದಿಂದ ಭಗವಂತನ ಅಪರೋಕ್ಷವಾಗುತ್ತದೆ. ಎಲ್ಲದಕ್ಕೂ **ಶ್ರೀರಂಗವಿಠ್ಠಲನ** ದಯೆ ಇರಬೇಕು ಎಂಬುದಾಗಿ ಶ್ರೀ ಶ್ರೀಪಾದರಾಜರು ತಿಳಿಸಿದ್ದಾರೆ.

**ವಿಳಾಸ: 731, 13ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಯಲಹಂಕ, ಬೆಂಗಳೂರು**

ನಿರಂತರ ರಂಗವಿಠಲ ಪತ್ರಿಕೆಗೆ ಶ್ರದ್ಧಾಪೂರ್ಣ ಲೇಖಕರಾದ ಅನಂತಪುರದ ನಿವಾಸಿಗಳಾದ **ಶ್ರೀಮತಿ ಕೆ. ಶ್ಯಾಮಲರಾವ್ ರವರ (ಪ್ರಾಣನುತ ನರಸಿಂಹವಿಠಲ ದಾಸಿ)** ಲೇಖನ.

## ಹರಿ-ಸರ್ವೋತ್ತಮ, ಸರ್ವನಿಯಾಮಕ

ಶ್ರೀ ಶ್ರೀಪಾದರಾಜರು ತಮ್ಮ ಕೀರ್ತನೆಯಲ್ಲಿ ಹರಿಯ ಸರ್ವೋತ್ತಮತ್ವವನ್ನು ನಿಜಸ್ವಾತಂತ್ರ್ಯವನ್ನು, ಸರ್ವಪ್ರೇರಕತ್ವವನ್ನು ವರ್ಣಿಸಿರುವುದು ಚೆನ್ನಾಗಿ ತಿಳಿದುಬರುತ್ತದೆ. ಇದೇ ಪ್ರಕಾರ ಹಲವಾರು ಹರಿದಾಸರುಗಳು ಕೀರ್ತನೆಗಳನ್ನು ಮಾಡಿ ಶ್ರೀಹರಿಯನ್ನು ಕೊಂಡಾಡಿರುವರು. ಶ್ರೀವಿಜಯದಾಸರ ಕೀರ್ತನೆಯು ಮತ್ತೊಂದು ನಿದರ್ಶನ.

**ನಾನಾ ವ್ಯಾಪಾರ ನಿನ್ನಾಧೀನವು**
**ನಾನಾ ಸಂಪತು ನಿನ್ನಾಧೀನವು**
**ನಾನಾ ಲೋಕಗಳು ನಿನ್ನಾಧೀನವು**
**ನಾನಾ ಜಡಗಳು ನಿನ್ನಾಧೀನವು**
**ನಾನಾ ಜೀವರು ನಿನ್ನಾಧೀನವು**
**ನಾನಾ ಕರ್ಮಗಳು ನಿನ್ನಾಧೀನವು**
**ನಾನಾ ಪ್ರೇರಣೆ ನಿನ್ನಾಧೀನವು**

ಶ್ರೀಗೋಪಾಲದಾಸರೂ ಕೆಳಗಿನಂತೆ ನುಡಿದಿದ್ದಾರೆ.

**ಧ್ವನಿಯು ವರ್ಣೋದಯ ಶಬ್ದವಾಚ್ಯನು ನೀನೆ - ದೇಶಕಾಲ ಕರ್ಮಗಳು ನೀನೆ ತನುಕರಣ ವಿಷಯ ಮಮ ಜೀವಸ್ವಾಮಿಯು ನೀನೆ - ಅಣು ಮಹಜ್ಜಗದ ಬಹಿರಂತರಾತ್ಮಕನೀನೇ।**

ಹಾಗೂ ಪೂಜ್ಯ ಶ್ರೀ ಗುರುಗೋವಿಂದದಾಸರು ಐತರೇಯೋಪನಿಷತ್ತಿನ ಅನುವಾದದ ಕೀರ್ತನೆಯಲ್ಲಿ ಹೀಗೆ ನುಡಿದಿರುವರು.

**ಸರ್ವ ಗುಣಪೂರ್ಣನು, ಸರ್ವಜ್ಞ ಅಚ್ಯುತನು**
**ನಿರಸ್ತ ಸಮಸ್ತದೋಷಾನು। ದೋಷನು ಎನಿಸುವ**
**ನರೆಯಣಾಭಿಧನಿಗೆ ಶರಣೆಂಬೆ॥**

ಇಲ್ಲಿ ಶ್ರೀಗುರುಗೋವಿಂದದಾಸರು ಶ್ರೀಹರಿಯ ಸರ್ವಜ್ಞತ್ವವನ್ನು ಸರ್ವದೋಷ ದೂರತ್ವವನ್ನು ಪರಿಪೂರ್ಣಗುಣತ್ವವನ್ನು ವರ್ಣಿಸಿ ನಮಿಸಿರುತ್ತಾರೆ.

**ವಿಳಾಸ: ನಂ. 3-286-3, ಹನುಮದ್ವಿಲಾಸ, ತಪೋವನ, 2ನೇ ಕ್ರಾಸ್, ಅನಂತಪುರಂ-515004**



ಶ್ರೀ ಶ್ರೀಪಾದರಾಜರ ಕೃತಿಗಳ ಹಾಗೂ
ಸಾದೃಶ್ಯಕೃತಿಗಳ ಅಧ್ಯಯನ

ಪ್ರವೃತ್ತಿಯಲ್ಲಿ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ರಂಗವಿಠಲ ಪತ್ರಿಕೆಯ ಅಭಿಮಾನಿಗಳಾದ ಸೇಡಮ್ ನಿವಾಸಿಗಳಾದ **ಡಾ॥ ಎಂ.ಜಿ. ದೇಶಪಾಂಡೆ** ಯವರ ಲೇಖನ.

## ಸಾಧನಕೆ ಬಗೆಗಾಣೆಯೆನ್ನಬಹುದೇ

ದಿನ ನಿತ್ಯದ ಚಟುವಟಿಕೆಗಳೆಲ್ಲಾ ದೇವರ ಪೂಜೆಯೇ ಹೊರತು, ಬೇರೆ ಏನೂ ಅಲ್ಲ ಎಂದು ಶ್ರೀ ಶ್ರೀಪಾದರಾಜರು ತಮ್ಮ ಕೃತಿಯಲ್ಲಿ ಸಾಮಾನ್ಯ ಮನುಷ್ಯನ ಅ ಸಹಾಯಕತೆಯನ್ನು ನಿರೂಪಿಸಿದ್ದಾರೆ. ಅದರಂತೆಯೇ **ಸಾಧನಕೆ ಬಗೆಗಾಣೆ ಎನ್ನಬಹುದೇ** ಎಂಬ ಕೃತಿಯಲ್ಲಿ ವಿಜಯದಾಸರು ಮನುಷ್ಯನ ಆಲಸ್ಯತನವನ್ನು ಮತ್ತು ಮೌಢ್ಯತೆಯನ್ನೂ ಹೊರಹಾಕಿದ್ದಾರೆ.

ಯಾರಾದರೂ ತನ್ನ ಸ್ವಧರ್ಮ ನಿರ್ಣಯಿಸಿದ ಕೆಲಸಕ್ಕೆ ಫಲದ ಆಶೆ ಮಾಡದೆ ಅಹಂಕಾರ ಮಮಕಾರಗಳನ್ನು ಬಿಟ್ಟು ಕೊನೆಯಲ್ಲಿ ಆ ಕರ್ಮವನ್ನು ಹರಿಗರ್ಪಿಸಿದರೆ ಅದು **ಯಜ್ಞ** ಎಂದೆನಿಸಿಕೊಳ್ಳುತ್ತದೆ. ಕರ್ಮಯೋಗಿಯಂತೆ ಭಗವಂತನ ಜ್ಞಾನ ಪೂರ್ವಕವಾದ ಭಕ್ತಿಯಿಂದ ಸೇವೆ ಮಾಡಬೇಕು. ಈ ರೀತಿಯಾದ ಸಾಧನೆ ಮಾಡಲು ಈಗಿನ ಸಮಕಾಲೀನ ಜನತೆಗೆ ಆಗುತ್ತಿಲ್ಲ, ಅದಕ್ಕೆ ದಾಸರು ಯಜ್ಞ ಮಾಡಲಾಗದಿದ್ದರೆ ಕೊನೆಯ ಪಕ್ಷ ಮಾಡಿದ ಕೆಲಸವನ್ನೇ ಯಜ್ಞವೆಂದು ತಿಳಿದು ಹರಿಗೆ ಅರ್ಪಿಸಿದರೂ ಭಗವಂತನು ಅವನ ಮನಸ್ಸಿನ ಸ್ಥಿತಿಯನ್ನು ತಿಳಿದು ಇದು ಒಂದು ರೀತಿಯ ಸಾಧನೆಯೇ ಎಂದು ಸ್ವೀಕರಿಸುತ್ತಾನೆ.

ವಿಜಯದಾಸರು ತಮ್ಮ ಈ ಕೀರ್ತನೆಯಲ್ಲಿ **ಹಿಂಡುಮಾತುಗಳೆಲ್ಲ ಹರಿಯನಾಮ, ರೋಗಾನುಭವವೆಲ್ಲ ಉಗ್ರತಪವು, ಮೈಮರೆತು ಮಲಗುವದೇ ಧರಣಿಗೆ ನಮಸ್ಕಾರ, ಬುದ್ಧಿಸಾಲದೆ ಸುಮ್ಮನೆ ಇರುವುದೇ ಸಮ್ಮತವು** ಮುಂತಾಗಿ ಹದಿನೆಂಟು ಸಾಮಾನ್ಯ ಕೆಲಸವನ್ನು ಪಟ್ಟಿ ಮಾಡಿ ನಮ್ಮಂಥ ಪಾಮರರು ಇವೇ ಕೆಲಸಗಳನ್ನು ಭಕ್ತಿಯಿಂದ **ವಿಜಯವಿಠಲನಿಗೆ** ಅರ್ಪಿಸಿದರೆ ಒಪ್ಪಿಕೊಳ್ಳುತ್ತಾನೆ, ಒಪ್ಪಿಸಿದವರನ್ನು ಅರ್ಪಿಸಿಕೊಳ್ಳುತ್ತಾನೆ.

ಇಷ್ಟಾದರೂ **ಸಾಧನಕೆ ಬಗೆಗಾಣೆ** ಎಂದು ಹೇಳಬೇಡಿರಿ ಎಂದು ಉಪದೇಶಿಸಿದ್ದಾರೆ.

**ವಿಳಾಸ: ಅಮರ ಮೆಡಿಕಲ್ ಸೆಂಟರ್, ಸೇಡಂ-585222.**

## ವಿಜಯದಾಸರ ಕೃತಿ

ಆವಾವ ಬಗೆಯಿಂದ ಹರಿಗರ್ಪಿಸೊ।
ಭಾವಶುದ್ಧನಾಗಿ ಮುಖ್ಯತ್ವವಹಿಸದೆ ॥ ಪ॥

ನೋಡುವ ನೋಟಗಳು ಹರಿಯೆ ನೋಡಿದನೆನ್ನಿ।
ವೋಡುವ ಆಟಗಳು ಹರಿಯೆ ವೋಡಿದನೆನ್ನಿ।
ಆಡುವ ಮಾತುಗಳು ಹರಿಯೇ ಆಡಿದನೆನ್ನಿ ॥ 1॥

ನಡಿವೆ ನಡಿಗೆ ಎಲ್ಲ ಹರಿಯೆ ನಡೆದನೆನ್ನಿ।
ಕೊಡುವ ದಾನಗಳು ಹರಿಯೆ ಕೊಟ್ಟನೆನ್ನಿ
ಒಡನಾಡುವಲೀಲೆ ಹರಿಯೇ ಆಡಿದನೆನ್ನಿ
ಪಿಡಿವ ಚೇಷ್ಟೆಗಳೆಲ್ಲ ಹರಿಯೆ ಪಿಡಿದನೆನ್ನಿ ॥ 2॥

ಕೇಳುವ ಶಬ್ದಗಳು ಹರಿಯೆ ಕೇಳಿದನೆನ್ನಿ
ಹೇಳುವ ವಿಧವನಿತು ಹರಿಯೆ ಎನ್ನಿ
ಮಾಲೆ ಧರಿಸುವುದು ಹರಿಯೆ ಧರಿಸಿದನೆನ್ನಿ
ಮೇಲು ಸುಖಬಡುವುದು ಹರಿಯೆ ಎನ್ನಿ ॥ 3॥

ವಾಸನೆಕೊಂಬುವುದು ಹರಿಯೆ ಕೊಂಡ ಎನ್ನಿ
ಭೂಷಣವಿಡುವುದು ಹರಿಯೆ ಎನ್ನಿ
ಲೇಸು ಬಯಸುವುದು ಹರಿಯೆ ಬಯಿಪನೆನ್ನಿ।
ಗ್ರಾಸ ಮೇಲುವುದೆಲ್ಲ ಹರಿಯೆ ಎನ್ನಿ ॥ 4॥

ಏನೆಂಬೆ ಹರಿಲೀಲೆ ನಿರ್ದೋಷ ನಿಸ್ಸಂಗ
ಅನಂತಕಾಲಕ್ಕೂ ಎಲ್ಲಿದ್ದರೂ
ಜ್ಞಾನಮಯ ಕಾಯ ವಿಜಯವಿಠಲರೇಯ
ನಾನಾವ್ಯಾಪಾರಗಳೆಲ್ಲ ಮಾಳ್ಪನೆನ್ನಿ ॥ 5॥

- ಸಮಗ್ರದಾಸಸಾಹಿತ್ಯ ಸಂಪುಟ-9 ಭಾಗ-1(ಪುಟ-11)





ನಿರಂತರ ರಂಗವಿಠಲ ಪತ್ರಿಕೆಗೆ ಶ್ರದ್ಧಾಪೂರ್ಣ ಲೇಖಕರಾದ ಅನಂತಪುರದ ನಿವಾಸಿಗಳಾದ **ಶ್ರೀ ರುಕ್ಮಿಣೀಶ ವಿಠಲದಾಸ (ಡಾ|| ಕೆ.ಆರ್. ರಾವ್)** ಅವರ ಲೇಖನ.

## ಸರ್ವಶಕ್ತಿ ಪ್ರದನಾದ ಸಾಕ್ಷಾದ್ವಿಷ್ಣುವೇ

**ಇತ್ತು ಇಂದ್ರಿಯಗಳ। ತತ್ವರ ಜೋಡಿಸಿ**
**ಹೊತ್ತು ಹೊತ್ತಿಗೆ ತುತ್ತು। ಇತ್ತು ರಕ್ಷಿಸುತಿರೇ**
**ಮತ್ತೆ ಮದಿಂದ್ರಿಯವೇ ಕರ್ತೃ ಎಂತೆಂದೊಂಬ**
**ಮತಿ ಭ್ರಮೆ ಬಿಡಿಸುತ್ತ। ಹರಿಸೊಕ್ರಿಯಾ ಭ್ರಮ**

ಪರಮಾತ್ಮನು ಮಾನವ ದೇಹವನ್ನು ಸೃಷ್ಟಿ ಮಾಡಿ ದೇಹವು ಕ್ರಿಯೆಗಳನ್ನು ನಡೆಸಲು ಇಂದ್ರಿಯಗಳನ್ನು ನೀಡಿದ್ದಾನೆ. ಆ ಇಂದ್ರಿಯಗಳು ಜಡವಾದ್ದರಿಂದ ಅವುಗಳ ಚಲನವಲನಕ್ಕೆ ಒಂದೊಂದು ಅಂಗಕ್ಕೆ ಒಬ್ಬ ತತ್ವಾಭಿಮಾನಿ ದೇವತೆಯನ್ನು ನಿಯಮಿಸಿ, ತತ್ವಾಭಿಮಾನಿದೇವತೆಗಳಲ್ಲಿ ತಾನೆ ಸ್ವತಃ ಇದ್ದು ಇಂದ್ರಿಯ ಕಾರ್ಯಗಳನ್ನು ನಡೆಸುತ್ತಾನೆ.

**ಎಂಟು ಗೇಣಿನ ದೇಹ ರೋಮಗ**
**ಳೆಂಟು ಕೋಟಿಯ ಕೀಲ್ಗಳಿರುವ -ಹರಿಭಕ್ತಿಸಾರ (ಪುಟ-66)**

ಇದು ಎಂಟು ಗೇಣಿನ ದೇಹ. ರೋಮಗಳು ಎಂಟು ಕೋಟಿ. ಕೀಲುಗಳು ಅರವತ್ತೆಂಟು. ಮಾಂಸದಿಂದ ಮಾಡಿದ ಮನೆ ಇದು. ಇದರಲ್ಲಿ ನೆಂಟನಾದ ನೀನು ಇರುವವರೆಗೆ ಜನರು ಆದರಿಸುತ್ತಾರೆ. ನೀನು ಹೊರಟೆಯೆಂದರೆ ಈ ದೇಹವನ್ನು ಒಣ ಹೆಂಟೆಯಲ್ಲಿ ಹೂಳುತ್ತಾರೆ! ಈ ದೇಹದಲ್ಲಿ ಯಾವ ಪುರುಷಾರ್ಥವುಂಟು?

ಇಷ್ಟೆ ಅಲ್ಲದೆ ಆ ದೇಹದ ಉಪಚಯಕ್ಕೆ ಕಾಲಕಾಲಕ್ಕೆ ಆಹಾರವನ್ನು ಒದಗಿಸಿ ಸಂರಕ್ಷಿಸುವುದು ಅವನೇ. ಹೀಗಿದ್ದು ಮಾನವನು ಇಂದ್ರಿಯಗಳ ಕಾರ್ಯಗಳು ತನ್ನದೇ ಎಂದು ಭ್ರಮಿಸುವನು. ಅಂತಹ ಭ್ರಮೆಯನ್ನು ತಪ್ಪಿಸಿ ಎಲ್ಲ ಕಾರ್ಯಗಳು ನಿನ್ನದೆ ಅಥವಾ ನಿನ್ನಾಧಿನವೆಂದು ತಿಳಿದರೆ ಎಷ್ಟು ಚೆನ್ನ ಎಂಬುದು ಗುರು ಗೋವಿಂದದಾಸರು ಈ ಕೃತಿಯ ಮೂಲಕ ತಿಳಿಸಿದ್ದಾರೆ.

**ವಿಳಾಸ: ನಂ. 3-286-3, ಹನುಮದ್ವಿಲಾಸ, ತಪೋವನ, 2ನೇ ಕ್ರಾಸ್, ಅನಂತಪುರಂ-515004**

ನಿರಂತರ ರಂಗವಿಠಲ ಪತ್ರಿಕೆಗೆ ಶ್ರದ್ಧಾಪೂರ್ಣ ಲೇಖಕರಾದ
**ಶ್ರೀ ನಾರಾಯಣ ಬಳ್ಳಾರಿ (ಹೊಸರಿತ್ತಿ)**ಯವರ ಲೇಖನ.

## ಕ್ರಿಯಾಶೀಲತೆಗೆ-ಹಸ್ತದ ವ್ಯಾಪಾರ

**ನಿನ್ನ ಸೂತ್ರದೊಳಡುವುವು ಚೈ**
**ತನ್ಯ ಸಚರಾಚರಗಳೆಲ್ಲವು**
**ನಿನ್ನ ಸೂತ್ರವು ತಪ್ಪಿದರೆ ಮುಗ್ಗುವುವು ಹೂಹೆಗಳು**
**ಇನ್ನು ಕರ್ಮ ಸುಕರ್ಮವೆಲ್ಲವ**
**ನಿನ್ನ ದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ -ಹರಿಭಕ್ತಿಸಾರ (ಪುಟ-69)**

ಹರಿಭಕ್ತರಾದ ಕನಕದಾಸರು ಜನಪ್ರಿಯವಾದ ಕೃತಿಗಳ ಮಾಲೆಯನ್ನೆ ನಿರ್ಮಿಸಿದ್ದಾರೆ. ಅವುಗಳಲ್ಲಿ ಹರಿಭಕ್ತಿಸಾರವೂ ಒಂದು. 108 ಪದ್ಯಗಳನ್ನೊಳಗೊಂಡ ಈ ಕೃತಿಯಲ್ಲಿ ಪರಮಾತ್ಮ ನಮ್ಮನ್ನು ರಕ್ಷಿಸಲಿ ಎಂದು ಪ್ರತಿಯೊಂದು ಪದ್ಯದಲ್ಲಿಯೂ ಬೇಡಿದ್ದಾರೆ. ಜೀವನಧರ್ಮ ಮತ್ತು ಮಾನವನಿಗೂ ದೈವಕ್ಕೂ ಇರುವ ಸಂಬಂಧವನ್ನು ಸುಂದರವಾಗಿ ವರ್ಣಿಸಿದ್ದಾರೆ. ಪದ್ಯಗಳ ಮೂಲಭಾವವೆಂದರೆ ಎಲ್ಲವೂ ನಿನ್ನದು, ನನ್ನದೆಂಬುದು ಏನೂ ಇಲ್ಲ.

ಸರ್ವವಸ್ತುಗಳಲ್ಲಿಯೂ ಚೇತನ ಸ್ವರೂಪಿಯಾದ ನೀನು ಸೂತ್ರಧಾರ. ಸೂತ್ರದಿಂದ ಆಡಿಸಿದಂತೆ ಚರಾಚರವಸ್ತುಗಳೆಲ್ಲವೂ ತಮ್ಮ ಕೆಲಸಗಳನ್ನು ನಿನ್ನ ಪ್ರೇರಣೆಯಂತೆ ಮಾಡುತ್ತವೆ.

ನಿನ್ನ ಸೂತ್ರದಾಟದಲ್ಲಿ ತಪ್ಪಿದರೆ ಮಕ್ಕಳು ಎಡವರಿಸಿ ಬೀಳುವಂತೆ ಅಧಃ ಪಥನವನ್ನು ಹೊಂದಬೇಕಾಗುತ್ತದೆ ಎಂದು ಕಟ್ಟು ನಿಟ್ಟಾಗಿ ತಿಳಿಸಿದ್ದಾರೆ.

**ಐದು ತತ್ವಗಳಾದವೊಂದುಕ್ಕೈದು ಕಡೆಯಲ್ಲಿ ತತ್ವವಿಪ್ಪತ್ತೈದು ಕೂಡಿದ ತನುವಿನಲ್ಲಿ ವಂಚಿಸದೆ ನೀನಿರಲು. -ಹರಿಭಕ್ತಿಸಾರ (ಪುಟ-65)**

ಐದೈದು ತತ್ವಗಳು ಸೇರಿ 25 ಆದುವು. ಅವುಗಳಲ್ಲಿ ನೀನಿದ್ದು ನಮ್ಮ ಕೈಯಿಂದ ಕರ್ಮಗಳ ಮಾಡಿಸುವಿ ಕರ್ಮಗಳನ್ನು ಮಾಡಲಿಕ್ಕೆ ಮುಖ್ಯವಾದುದುಕ್ಕೈ. ಇವು ನಿತ್ಯ ಚರ್ಯೆಯ ಎಲ್ಲ ಕಾರ್ಯಗಳನ್ನು ನಡೆಸುತ್ತದೆ ಮತ್ತು ತತ್ವಗಳ ಅನುಷ್ಠಾನ ದೇವತೆಗಳನ್ನು ಕರಗಳಲ್ಲಿ ಧ್ಯಾನಿಸುವ ಕ್ರಮವು ಸಂಧ್ಯಾವಂದನೆಯ ಮುಖ್ಯಕ್ರಮ. ಇವುಗಳೆಲ್ಲವು ವ್ಯಾಪಾರವಿದ್ದಂತೆ. ಇಂತಹ ಕರ್ಮ ಸುಕರ್ಮವೆಲ್ಲವನ್ನು ನಿನ್ನಲ್ಲಿ ಒಪ್ಪಿಸುತ್ತೇನೆ. ನೀನೆ ರಕ್ಷಿಸು ಎಂದು ಬೇಡುವುದೆ ಆಗಿದೆ. ಈ ಸಾಲುಗಳು **ನಿನ್ನ ಪೂಜೆಯೊ ರಾಮಾ** ಎನ್ನುವದರ ವ್ಯಾಖ್ಯಾನವಿದ್ದಂತೆ ತೋರುತ್ತದೆ.

**ವಿಳಾಸ: 29/ಎ, ಧೀರಶ್ರೀ ಮಾರುತಿನಗರ, ಬೆಮೆಲ ಅಂಚೆ**





ಅಖಿಲ ಭಾರತ ಮಾಧ್ವ ಮಹಾಮಂಡಲದ
( ಮಲ್ಲೇಶ್ವರಂ ಮಹಿಳಾ ಶಾಖೆ) ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ
**ಶ್ರೀಮತಿ ಸುಶೀಲ ರಂಗನಾಥರಾವ್ ರವರ** ಲೇಖನ.

## ಆವಾವ ಬಗೆಯಿಂದ ಹರಿಗರ್ಪಿಸೋ

ಶ್ರೀಪಾದರಾಜರು ರಚಿಸಿರುವ **ನಿನ್ನ ಪೂಜೆಯೋ ರಾಮು** ಎನ್ನುವ ದೇವರನಾಮದಲ್ಲಿ ಪ್ರತಿಯೊಂದನ್ನು ಶ್ರೀಹರಿಯೇ ಮಾಡಿಸುತ್ತಾನೆ, ಎಲ್ಲಾ ಕಾರ್ಯಗಳು ಅವನದೇ, ಎಂದು ಅನುಸಂಧಾನ ಮಾಡಲು ಹೇಳುತ್ತಾರೆ.

ಶ್ರೀಕನಕದಾಸರ **ತನು ನಿನ್ನದು ಜೀವನ ನಿನ್ನದು** ಎನ್ನುವ ಕೃತಿಯೂ ಇದನ್ನೇ ಹೇಳುತ್ತದೆ. ಕಣ್ಣು, ಕಿವಿ, ದೇಹ, ಜಿಹ್ವೆ ಪಂಚೇಂದ್ರಿಯಗಳು ಎಲ್ಲವೂ ನಿನ್ನದೇ ಎನ್ನುತ್ತಾರೆ.

ಗುರು ಶ್ರೀಶವಿಠಲದಾಸರು **ಕರಣಗಳಿಂದ ಆಚರಿಸುವ ವಿಷಯ ಶ್ರೀಹರಿ ನಿನ್ನ ಸೇವೆಯಾಗಲಿ ಶ್ರೀನಿವಾಸ ದಯಾನಿಧೆ** ಎಂದು ಹೇಳುತ್ತಾರೆ.

ಹರಿಗರ್ಪಿಸಲು ಮನಶ್ಶುದ್ಧಿಯಿರಬೇಕು. ಬಗೆ ಬಗೆಯಲ್ಲಿ ತಾನು ಮಾಡುವ ಕಾರ್ಯಗಳನ್ನು ತಾನೇ ಮಾಡಿದೆನೆಂಬ ಭಾವವನ್ನು ತೋರದೆ ಹರಿಯಕಾರ್ಯವೆಂದು ಬಗೆಯಬೇಕು. ಸಕಲ ಚಟುವಟಿಕೆಗಳು ಹರಿಯದೆಂಬ ಭಾವನೆಯಿಂದ ಮಾಡುವುದು ಶುದ್ಧವಾಗಿರುತ್ತದೆ. ನೋಡುವುದು, ಮಾತನಾಡುವುದು ಎಲ್ಲವೂ, ಹರಿಯು ನೋಡಿ ನಮಗೆ ನೋಡಿಸುವನು, ಚಲನವಲನಗಳೆಲ್ಲವೂ ಹರಿಯು ನಮ್ಮಲ್ಲಿದ್ದು ಮಾಡಿಸುವನೆಂಬ ಚಿಂತನೆಯು ಉತ್ತಮ ಚಿಂತನೆಯಾಗುತ್ತದೆ.

ದಾನ ಧರ್ಮಗಳೆಲ್ಲವೂ ಹರಿಯು ನಮ್ಮಲ್ಲಿದ್ದು ಪ್ರೇರಿಸಿದನೆನ್ನಿ, ಶ್ರವಣವ್ಯಾಪಾರವು ದೇವರಿಂದ ನಡೆಸುವುದು ಎಂಬ ಭಾವನೆಯು ಶುದ್ದವಾದದ್ದು. ದೇಹಕ್ಕೆ ಮಾಡಿಕೊಳ್ಳುವ ಶೃಂಗಾರ ಧರಿಸುವ ಮಾಲೆ ಎಲ್ಲವೂ ಹರಿಗರ್ಪಿತವು. ಈ ರೀತಿ ಹರಿಯ ಲೀಲೆ ಏನೆಂದು ಬಣ್ಣಿಸಬೇಕು, ಎಲ್ಲವೂ ಅವನಿಗೆ ಎಂದು ತಿಳಿಯಬೇಕು.

ತತ್ವಾಭಿಮಾನಿ ದೇವತೆಗಳಲ್ಲಿ ನಿಂತು ಶ್ರೀಹರಿ ಎಲ್ಲಾ ಕೆಲಸವನ್ನು ಮಾಡಿಸುತ್ತಾನೆ. ಯಾವ ಕೆಲಸಮಾಡಿದರೂ ಅದು ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಹರಿಗೆ ಅರ್ಪಣೆ ಮಾಡಬೇಕು.

**ವಿಳಾಸ: ನಂ. 7, ಫ್ಲಾಟ್1, 14ನೇ ಎ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3**

ಬೆಂಗಳೂರು ಜಯನಗರ ನಿವಾಸಿಗಳು, ಹರಿದಾಸ
ಸಾಹಿತ್ಯ ಸಂಶೋಧಕ ಮತ್ತು ಉಪನ್ಯಾಸಕರಾಗಿರುವ
**ಶ್ರೀ ಜಿ.ಆರ್. ರಘುನಾಥರಾಯ**ರವರ ಲೇಖನ.

## ವ್ಯಕ್ತಿತ್ವ ಸಂಸ್ಕರಣದಿಂದಲೇ ಮನುಕುಲದ ಒಳಿತೆಂದು ಸಾರುವ ಕೃತಿ

**ನಿನ್ನ ಪೂಜೆಯೊ ರಾಮ**
**ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ.**

ಶರೀರದ 24 ತತ್ವಾಭಿಮಾನಿ ದೇವತೆಗಳು ಇಂದ್ರಿಯಗಳನ್ನು ನಿಯಂತ್ರಿಸುತ್ತಾರೆ. ಇಂತಹ ತತ್ವಾಭಿಮಾನಿ ದೇವತೆಗಳಿಗೆ ಶ್ರೀಹರಿಯೆ ಪ್ರೇರಕನು ಎಂಬುದು ಶ್ರೀಪಾದರಾಜರ ಅಭಿಪ್ರಾಯ. ತಮ್ಮನ್ನು ತಾವೇ ಭಗವಂತನಲ್ಲಿ ಸಮರ್ಪಿಸಿಕೊಂಡಿರುವ ಹರಿದಾಸರಿಗೆ ತಾವು ಕೈಗೊಳ್ಳುವ ಸಮಸ್ತ ಕಾರ್ಯವೂ ಪರಮಾತ್ಮನ ಕೈಂಕರ್ಯವೆನ್ನಿಸುವುದು. ಅದಕ್ಕಾಗಿಯೇ' **ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ** ಎಂದು ನುಡಿದಿರುವರು.

ಕೀರ್ತನೆಯ ಮೊದಲ ನುಡಿಯಲ್ಲಿ ಹರಿಭಕ್ತನ ನಿತ್ಯ ಚರ್ಯೆಗಳೆಲ್ಲವೂ ವರ್ಣಿಸಲ್ಪಟ್ಟಿವೆ. ಆತನ ಸ್ನಾನ, ಸಂಧ್ಯಾವಂದನೆ ಮೊದಲ್ಗೊಂಡು ಭೋಗಾದಿಗಳೆಲ್ಲ ಭಗವಂತನಿಗೆ ಮೀಸಲು ಎಂಬ ಧ್ಯೇಯವನ್ನು ಕಾಣಬಹುದು.

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್**
**(ಗೀತಾ- 9-27)**

ನೀನು ಮಾಡುವ ಕೆಲಸ, ತಿನ್ನುವ ತಿಂಡಿ, ಹೋಮಿಸುವುದು, ದಾನಕೊಡುವುದು, ಸ್ವಧರ್ಮ ಆಚರಣೆ, ರೂಪ ತಪಸ್ಸು ಎಲ್ಲವನ್ನೂ ನನಗೆ ಅರ್ಪಿಸು ಎಂಬ ಗೀತಾವಾಕ್ಯದ ಸಾರವೇ ಈ ಕೃತಿ. ಜಿವೋ್ತ್ತಮರಾದ ವಾಯುದೇವರಿಗೂ, ಸರ್ವೋತ್ತಮನಾದ ಶ್ರೀ ಹರಿಯೇ ಪ್ರಧಾನ ನಿರ್ವಾಹಕನು.

ಈ ಅಭಿಪ್ರಾಯ ಶ್ರೀಮನ್ ಮಧ್ವಾಚಾರ್ಯರ ವಾಣಿಯಲ್ಲಿ ಕಾಣಬಹುದಾಗಿದೆ.

**ಅನಂತೇಂದ್ರಿಯ ಸಂಭೋಗ್ಯಾನ್ ಅತರ್ಕ್ಯಾಂಶ: ರಮಾಧಿಭಿ:!**

ಕಡೆಯ ನುಡಿಯಲ್ಲಿ ಶ್ರೀ ಶ್ರೀಪಾದರಾಜರು ಶ್ರೀ ವಿಷ್ಣುವಿನ ರೂಪ ಮಹಾತ್ಮೆಯನ್ನು ತಿಳಿಸಿ ತಮ್ಮನ್ನು ಅನುಗ್ರಹಿಸಬೇಕೆಂದು ಶ್ರೀ ಹರಿಯಲ್ಲಿ ಬೇಡಿಕೊಳ್ಳುವರು.

**1003. ಗರ್ಗೇಶ್ವರಿ 27 ಮೇನ್ ರಸ್ತೆ, ಜಯನಗರ, 9ನೇ ಬ್ಲಾಕ್, ಬೆಂಗಳೂರು-560 069**





ಬೆಂಗಳೂರು ನಿವಾಸಿಗಳು ಹಾಗೂ ಹರಿದಾಸ
ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುವ
**ಶ್ರೀಮತಿ ಅಂಬುಜ ಆರ್. ಕೃಷ್ಣ**ರವರ ಲೇಖನ.

## ಭಕ್ತಿಯಿಂದ ಭಗವಂತನ ಸಾಕ್ಷಾತ್ಕಾರ

ಸರ್ವೋತ್ತಮನಿಗೆ ಸರ್ವವನ್ನು ಅರ್ಪಿಸುವ ಸರ್ವಸಮರ್ಪಣ ಭಾವವೇ ದಾಸಸಾಹಿತ್ಯದ ವೈಶಿಷ್ಟ್ಯ. ದಿನ ನಿತ್ಯದ ಆಗುಹೋಗುಗಳಿಗೂ ಶ್ರೀಶನ ಅನುಗ್ರಹವೇ ಕಾರಣ ಎಂದು ಅಪಾರವಾಗಿ ನಂಬಿಬದುಕಿದವರು, ಹರಿದಾಸರು, ಅದರಂತೆ ಭಕ್ತಿಯಿಂದ ಭಗವಂತನ ಸಾಕ್ಷತ್ಕಾರ ಎಂಬುದನ್ನು ಶ್ರೀಸಾಮಾನ್ಯರಿಗೆ ತೋರಿಸಿಕೊಟ್ಟವರು ಶ್ರೀ ಶ್ರೀಪಾದರಾಜರು.

**ತನು ನಿನ್ನದು ಜೀವನ ನಿನ್ನದು, ಸ್ವಾಮಿ**
**ಅನುದಿನದಲಿ ಬಾಹ ಸುಖ ದುಃಖ ನಿನ್ನದಯ್ಯಾ॥**

**ಸವಿನುಡಿ ವೇದಪುರಾಣ ಶಾಸ್ತ್ರಗಳೆಲ್ಲ**
**ಕಿವಿಗೊಟ್ಟು ಕೇಳುವ ಕಥೆ ನಿನ್ನದು॥**

ನಾವು ಮಾಡುವ ಕರ್ಮಗಳೆಲ್ಲವೂ, ಪ್ರತಿಯೊಂದು ದೈನಂದಿನ ಕಾರ್ಯಗಳೆಲ್ಲವೂ ಶ್ರೀರಾಮನ ಪೂಜೆಯಲ್ಲವೆ ಎನ್ನುತ್ತಾರೆ ಶ್ರೀಪಾದರಾಜರು. ಆದರೆ ಆ ಕಾರ್ಯಗಳನ್ನು ಮಾಡಿಸುವವನು ಯಾರು? ವಿಶ್ವರೂಪಿಯಾದ ಭಗವಂತನೇ, ಸರ್ವಜೀವರುಗಳಿಗೂ ಪ್ರೇರಕನಾಗಿದ್ದಾನೆ. **ರಂಗವಿಠಲ** ಜೀವಿಗಳ ಮೂಲಕ ಕರ್ಮಗಳನ್ನು ಮಾಡಿಸಿ ಆ ಜೀವಿಗಳ ಸರ್ವಶುಭಗಳಿಗೆ ಒಡೆಯನೆನಿಸುತ್ತಾನೆ. ಜಗನ್ನಾಥದಾಸರು ಹರಿಕಥಾಮೃತಸಾರದ ಪಂಚತನ್ಮಾತ್ರಸಂಧಿಯಲ್ಲಿ ತಿಳಿಸಿರುವಂತೆ ಅನ್ನಮಯಾದಿ ಭಗವದ್ರೂಪಗಳು ದೋಷದೂರವಾಗಿದ್ದು, ಕರಣ ಧಾತುಗಳನ್ನು ದೋಷಮುಕ್ತಗೊಳಿಸುವುವು. ನಮ್ಮ ಶರೀರ, ಮನಸ್ಸು ಇಂದ್ರಿಯಗಳ ಆರೋಗ್ಯಕ್ಕೆ ದೋಷ ದೂರನಾದ ಅನ್ನಮಯಾದಿ ಭಗವದ್ರೂಪಗಳನ್ನು ಸದಾ ಸ್ಮರಿಸುತ್ತಿರಬೇಕು.

**ವಿಳಾಸ: ನಂ. 27/1, 3ನೇಮುಖ್ಯರಸ್ತೆ, ಪೂರ್ಣಪ್ರಜ್ಞ ಬಡಾವಣೆ, ಬನಶಂಕರಿ, ಬೆಂಗಳೂರು-85**

ಮನಶಾಸ್ತ್ರಜ್ಞರಾಗಿ ಸೇವೆಸಲ್ಲಿಸುತ್ತಿದ್ದು ರಾಷ್ಟ್ರೀಯ
ವೇದ ವಿಜ್ಞಾನ ಸಂಸ್ಥೆಯ ಜಂಟಿಕಾರ್ಯದರ್ಶಿಯಾಗಿರುವ
**ಹೆಬ್ಬಣಿ . ಜಿ. ರಾಮಚಂದ್ರ** ರವರ ಲೇಖನ.

## ತತ್ವಜ್ಞಾನದ ಉಪದೇಶ ಶ್ರೀಪಾದರಾಜರ ಕೃತಿ ಸಂದೇಶ

ಪ್ರಸ್ತುತ ಕೃತಿಯ ಅಧ್ಯಯನದ ದೃಷ್ಟಿಕೋನದಲ್ಲಿ ತತ್ವಗಳಲ್ಲಿ ಹುದುಗಿರುವ ಸಂದೇಶ ಶ್ರದ್ಧೆಗಳೇ ಮುಖ್ಯವಾಗಿವೆ. ದಾಸರು ಕಾಣುವ ಉನ್ನತ ನೈತಿಕ ದೃಷ್ಟಿಯಲ್ಲಿ ಮೌಲ್ಯಪ್ರಜ್ಞೆಯ ಬೋಧನೆಯಿದೆ. ಬದುಕಿನ ಯಥಾವತ್ತಾದ ಪ್ರತಿಕೃತಿಯೆಂಬಂತಿರುವ ಶ್ರೀಪಾದರಾಜರ ಕೃತಿಯಲ್ಲಿ ತತ್ವಜ್ಞಾನದ ಅಮೃತಧಾರೆಯಿದೆ.

ಪ್ರಕೃತಿಯಿಂದ ಮಹತ್ತತ್ವ, ಮಹತ್ತತ್ವದಿಂದ ಅಹಂಕಾರ ತತ್ವ, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯ, ಪಂಚಭೂತಗಳು ಹಾಗೂ ಪಂಚತನ್ಮಾತ್ರೆಗಳು ಹೀಗೆ ಇಪ್ಪತ್ತುನಾಲ್ಕು ತತ್ವಗಳು ತತ್ವಜ್ಞಾನದ ಬೆಳಕಿನಲ್ಲಿ ಭಗವಂತನ ಅನುಗ್ರಹ ಪಡೆಯಲೋಸುಗ ತನ್ನ ದೇಹದ ಸರ್ವ ಅಂಗಾಂಗಳಲ್ಲಿ ಭಗವಂತನ ರೂಪಗಳನ್ನು ಚಿಂತಿಸಬೇಕು. ಇಂತಹ ಕ್ರಿಯೆಯನ್ನು ತತ್ವನ್ಯಾಸ ಎನ್ನುವರು.

ಇದರಿಂದ ದೇಹದ ಸರ್ವವ್ಯಾಪಾರವನ್ನು ದೇವತೆಗಳೇ ಮಾಡುವರೆಂಬ ಅರಿವು ದೃಢವಾಗುತ್ತದೆ. ಅಹಂಕಾರ ನಾಶವಾಗಿ, ಈ ದೇಹವು ಭಗವಂತನ ಆವಾಸಸ್ಥಾನವೆಂಬ ಪ್ರಜ್ಞೆ ಮೂಡುತ್ತದೆ. ಈಶಾವಾಸ್ಯವಾದ ಈ ದೇಹದ ಮೂಲಕ ನಡೆಯುವ ಎಲ್ಲ ಕ್ರಿಯೆಗಳು ಭಗವಂತನ ಅಧೀನ ಹಾಗೂ ಅವನ ಪೂಜೆಯೆಂದೆನಿಸುತ್ತದೆ.

ಹೀಗೆ ಅಪಾರ ಮಹಿಮನಾದ ಭಗವಂತನ ನಾಮ-ರೂಪ-ಗುಣ ಕ್ರಿಯೆಗಳ ಚಿಂತನೆಯಲ್ಲಿ ಅವನ ಅಪ್ರಾಕೃತ ರೂಪವನ್ನು ನಿರಂತರ ಸ್ಮರಿಸುವುದೇ ಧ್ಯಾನವಾಗುವದು. ದೇವರ ಪಾದದಿಂದ ಆರಂಭಿಸಿ ಶಿರಸ್ಸಿನವರೆಗಿನ ಒಂದೊಂದೇ ಅಂಗಗಳನ್ನು ಅವುಗಳ ರೂಪ, ಕಾರ್ಯಗಳನ್ನು ಸ್ಮರಿಸುವ ಕ್ರಿಯೆಯನ್ನು **ಧಾರಣ** ಎನ್ನುತ್ತೇವೆ. ಧ್ಯಾನದಿಂದ ಸಮಾಧಿಸ್ಥಿಯ ಸಾಧನೆ. ನಮ್ಮ ದೇಹದ ಅಸ್ಥಿ, ಮಾಂಸ, ಚರ್ಮಗಳಲ್ಲಿ, ಪೃಥ್ವಿತತ್ವ ರಕ್ತ, ರಸಾದಿಗಳಲ್ಲಿ ಅಪ್‌ತತ್ವ ಕಣ್ಣಿನಲ್ಲಿ ತೇಜಸ್‌ತತ್ವ, ಶರೀರಾದ್ಯಂತ ವಾಯುತತ್ವ, ಶ್ವಾಸಕೋಶ ಹೃದಯಾದಿಗಳ ಒಳ-ಹೊರ ಭಾಗಗಳಲ್ಲಿ ಆಕಾಶತತ್ವ ಹೀಗೆ ಪಂಚಭೂತಾತ್ಮಗಳ ಚಿಂತನೆಯಲ್ಲಿ ಸ್ಥೂಲ ಶರೀರವನ್ನು ತಿಳಿಯಬೇಕು. ಮರಣಾನಂತರ ಈ ತತ್ವಗಳು ದೇಹದ ಹೊರಗಿನ ಪಂಚಭೂತಗಳಲ್ಲಿ ವಿಲೀನಗೊಳ್ಳುತ್ತವೆ.

**ವಿಳಾಸ: ನಂ, 16, 1ನೇ ಅಡ್ಡರಸ್ತೆ, ರಾಮರಾವ್ ಬಡಾವಣೆ ಕತ್ತರಗುಪ್ಪೆ, ಬೆಂಗಳೂರು-85**





ಮೈಸೂರಿನ ಆಕಾಶವಾಣಿಯಲ್ಲಿ ಕಾರ್ಯಕ್ರಮ ಆಯೋಜಕರು ಹಾಗೂ
ಬೆಂಗಳೂರಿನ ಆಕಾಶವಾಣಿಯಲ್ಲಿ ವಾರ್ತಾಮಾಹಿತಿ ಅಧಿಕಾರಿಗಳು, ಪ್ರಸ್ತುತ
ಸ್ವನಿರತ ಪತ್ರಕರ್ತರಾದ **ಶ್ರೀ ಆರ್. ಕೆ. ದಿವಾಕರ** ರವರ ಲೇಖನ.

## ಭೋಗದಲ್ಲಿ ವೈರಾಗ್ಯಾನುಭವದ ಲಕ್ಷಣಬೋಧೆ!

ಶ್ರೀಪಾದರಾಜ ಸ್ವಾಮಿಗಳ ಬಹುತೇಕ ಅನುಭವವೇದ್ಯ ಹಾಡುಗಳಂತೆ **'ರಾಮಾ, ನಿನ್ನ ಪೂಜೆಯೋ'** ಎಂಬ ಹಾಡು ಸಹ ಭೋಗ-ವೈರಾಗ್ಯಗಳನ್ನು ಒಟ್ಟಿಗೇ ಆಚರಿಸುವ ಲಕ್ಷಣ ಬೋಧೆಯಾಗಿದೆ! ಏನೆಲ್ಲವನ್ನೂ ಬಿಟ್ಟುಕೊಟ್ಟಿರುವೆನೆಂಬ ಡಂಭದ ಅರೆಬೆಂದ ರಕ್ತ, ನೋಡುಗರಮುಂದೆ ಗಟ್ಟಿಯಾಗಿ ತೊಡಗುವ ಹರಿನಾಮ ಜಪದ ವೇಳೆಯೇ, ಆತನೊಳಗೆ, ಎಲ್ಲಾ ಭೋಗೇಚ್ಛೆಗಳೂ, ಮುತ್ತಿ ಕಿತ್ತಾಡುತ್ತಿರುತ್ತವೆ! ಕಬೀರಾ **ಚುದಾ (ಕ್ಷುಧಾ) ಕೈಕೂ ಕರ್ರೆ ಕರತ್ ಭಜನ್ ಮೆ ಭಂಗ್ ಯಾಕೋ ಟುಕಡಾ ಡಾಲಕೆ ಸುರನ್ ಕರ್ರೆ ನಿಸಂಕ್** ಎಂದು ಆ ಸಂತಶ್ರೇಷ್ಠ ಅಂದಿರುವುದು ಇದನ್ನೇ. ಇದರ ಸ್ಥೂಲಭಾವವನ್ನೇ ಇನ್ನಷ್ಟು ಸ್ಫುಟವಾಗಿ, ವಾಚ್ಯವಾಗಿ, ಅನುಸಂಧಾನಸಾಧ್ಯ ಪರವಾಗಿ, ಸ್ವಾಮಿಗಳು, ಈ ಹಾಡಿನಲ್ಲಿ ಅಪ್ಪಣೆ ಕೊಡಿಸಿರುವುದು!

ವೈರಾಗ್ಯವೆಂದರೆ, ಜೀವನದ ರತಿ-ರಸಗಳನ್ನೆಲ್ಲಾ ಸಾರಾ-ಸಗಟಾಗಿ ಬಿಟ್ಟೇ ಬಿಡುವುದಲ್ಲ, ಹಾಗೆ ಬಿಟ್ಟುಬಿಟ್ಟರೆ ಬದುಕೇ ಇಲ್ಲ! ಆದರೆ ಆ ರಸಾಸ್ವಾದಕ್ಕೆ ಹೇಗೆ, ಎಲ್ಲಿ ಎಂಬ ಇತಿಯೂ ತನ್ನದೆಷ್ಟು ಎಂಬ ರೀತಿಯೂ ಇರುತ್ತದೆ. ಈ ರಸವಾದರೂ ಹುಟ್ಟುವುದೆಲ್ಲಿ? ಎಲ್ಲಿಗೆ ಹೋಗುತ್ತದೆ ಎಂದು ಪ್ರಜ್ಞಾಪೂರ್ವಕವಾಗಿ ಆಲೋಚಿಸಿದರೆ, ಆ ರಸದ ಅನುಭೋಗವನ್ನು, ತನ್ನದೆಷ್ಟೋ ಅಷ್ಟನ್ನು ಒಂದು ಬಿಂದುವಿನಷ್ಟೂ ಹೆಚ್ಚೂ ಇಲ್ಲದೆ, ಕಡಿಮೆಯೂ ಇಲ್ಲದೆ ತೆಗೆದುಕೊಳ್ಳುವುದು ಸಾಧ್ಯವಾಗುತ್ತದೆ! ಮಿಕ್ಕಿದ್ದೆಲ್ಲಿ ಹೋಗುತ್ತಿದೆ ಎಂದು ಒಳಗಣ್ಣು ಹಾಯಿಸಿ ನೋಡಹೋದರೆ, ಬೃಹತ್ತೂ-ಮಹತ್ತೂ ತೆರೆದುಕೊಂಡು ಧೃಗ್ಗೋಚರವಾಗುತ್ತದೆ, **'ಸರ್ವ ಜೀವರ ಸರ್ವ ಜ್ಞಾನ-ಕರ್ಮಗಳ ಸರ್ವಶುಭಭೋಕ್ತ'**ನ ಇರವು! ಇದೇ, **'ತುಂಗಗುಣ ಪರಿಪೂರ್ಣ ರಂಗವಿಠಲ ಮಂಗಳಾಂಗನ'** ಸ್ವರೂಪ ದರ್ಶನ; ಸಾಕ್ಷಾತ್ಕಾರ!

**ವಿಳಾಸ : ದಿವ್ಯವು 335, ಎರಡನೇ ಮುಖ್ಯ ರಸ್ತೆ, ಲಕ್ಷ್ಮೀಪುರ, ಬೆಂಗಳೂರು-560019**

ವಲ್ಲಭ-ಮಧ್ವ ಸಂಪ್ರದಾಯದ ಕೃಷ್ಣಕಾವ್ಯ ಕುರಿತಂತೆ ಡಾಕ್ಟರೇಟ್ ಪಡೆದ
**ಡಾ|| ಎನ್.ಜಿ. ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯರ**
ಲೇಖನ.

## ಜೀವನದ ಮೌಲ್ಯಗಳನ್ನು ಕೀರ್ತಿಸುವ ಕೃತಿ

ಪೂಜೆ ಅಂದರೆ ಮೊದಲನೆಯದಾಗಿ ಪೂಜಾ ಉಪಕರಣಗಳನ್ನು ಚೆನ್ನಾಗಿ ತೊಳೆದಿಡುವುದು. ಈ ಕೆಲಸ ಸಮರ್ಪಕವಾಗಿ ನಡೆಯದಿದ್ದರೆ ಪೂಜೆ ಮಾಡುವವರ ಸಿಟ್ಟು ನೆತ್ತಿಗೇರುತ್ತದೆ. ಪೂಜೆಗೆ ಕುಳಿತಿರುವಾಗ ಧೂಪಾರತಿಗೆ ಕೆಂಡ ತರಲು ತಡವಾದರೆ ಕೆಂಡಾ ಮಂಡಲವಾಗಿ ಧೂಪಾರತಿ ತಟ್ಟೆಯನ್ನು ರೂಯ್ ಎಂದು ಎಸೆಯುವುದೂ ಸಹ ಉಂಟು. ಆದರೆ ಇತ್ತೀಚಿನ ಆಧುನಿಕರು ಈ ರೀತಿಯ ಸಿಟ್ಟು ಕೋಪಗಳು ಬೇಡೆಂದು ಬೆಳ್ಳಿಯ ಉಪಕರಣೆಗಳನ್ನೆ ಉಪಯೋಗಿಸುತ್ತಾರೆ. ತೊಳೆಯುವುದು ಸುಲಭ ಆದರೂ ಸ್ನಾನ ಮಾಡಿದಾಗಿನಿಂದ ಒಂದು ಕೂದಲು ಸಿಕ್ಕಿತು, ಮೈಲಿಗೆ ದಾರ ತಾಕಿತು. ನೈವೇದ್ಯಕ್ಕೆ ತರುವುದು ತಡವಾಯಿತು, ಎಂದು ಇತ್ಯಾದಿ ನೂರಾರು ಕಾರಣಗಳಿಂದ ಮನಸ್ಸು ಅಸ್ತವ್ಯಸ್ಥವಾಗುವುದುಂಟು. ಇದನ್ನೆಲ್ಲ ಅನುಭವದಿಂದ ಕಂಡು ಕೇಳಿದ ಹರಿದಾಸರುಗಳು **ಸಿಟ್ಟೆಂಬ ಹೊಲೆಯನನ್ನು ದೂರ ತಳ್ಳಿ** ಎಂದು ಹೇಳಿದ್ದಾರೆ. **ಸುಲಭ ಪೂಜೆ ಮಾಡಿ, ನಿನ್ನ ಪೂಜೆಯೋರಾಮ** ಎಂಬ ಕೃತಿಗಳಲ್ಲಿ ಸಕಲ ದೇವಾನುದೇವತೆಗಳ ಆವಾಸಸ್ಥಾನವಾಗಿರುವ ನಮ್ಮ ಈ ಸಾಧನ ಶರೀರದಿಂದ ಮಾಡುವ ಸಕಲ ಕರ್ಮಕ್ರಿಯೆಗಳೆಲ್ಲವೂ ಶ್ರೀಹರಿಯ ಪೂಜೆ ಎಂದು ತಿಳಿಸಿದ್ದಾರೆ.

ಶ್ರೀ ಶ್ರೀಪಾದರಾಜರ ಭಾವನೆಯನ್ನನುಸರಿಸಿ ವ್ಯಾಸರಾಜರು, ಪುರಂದರದಾಸರು, ಜಗನ್ನಾಥದಾಸರು ಮುಂತಾದ ಹರಿದಾಸರು ಇದೇ ಭಾವನೆಯನ್ನು ಪುಷ್ಟಿಗೊಳಿಸಿದ್ದಾರೆ. **ಅರಿತವರಿಗತಿಸುಲಭ** ಹರಿಯಪೂಜೆ ಎಂಬ ಅರಿವನ್ನು ಮೂಡಿಸಿದ್ದಾರೆ.

ದೀಪ ಇಲ್ಲ, ಧೂಪ ಇಲ್ಲ ನೈವೇದ್ಯವಿಲ್ಲ ಅದಿಲ್ಲ, ಇದಿಲ್ಲ ಹೇಗೆ ಅರ್ಚಿಸಲಿ ಎಂದು ಗೊಣಗಬೇಡಿ, ಕೈಚೆಲ್ಲಿ ಕೂಡಬೇಡಿ. ಉದಯ ಕಾಲದಲ್ಲೇ ಎದ್ದು ಗಡಗಡ ನಡುಗುತ ನದಿಯಲ್ಲಿ ಮಿಂದೆನೆಂದು ಹಿಗ್ಗುತ, ಮದ, ಮತ್ಸರ, ಕ್ರೋಧ ಒಳಗೆ ತುಂಬಿಟ್ಟುಕೊಂಡು ಬದಿಯಲಿದ್ದವರಿಗೆ ಆಶ್ಚರ್ಯ ತೋರಬೇಡಿ. **ಕಂಚುಗಾರನ ಬಿಡಾರದಂದದಿ ಕಂಚು, ಹಿತ್ತಾಳೆ, ಬೆಳ್ಳಿ, ಪ್ರತಿಮೆಗಳನ್ನು ಹರಡಿಕೊಂಡು ಮಿಂಚಬೇಕೆಂದು ಬಲು ಜ್ಯೋತಿಗಳನೆ ಹಚ್ಚಿ ವಂಚನೆಯಿಂದ ಪೂಜೆ ಮಾಡಬೇಡಿ.**





ವೃತ್ತಿಯಲ್ಲಿ ಮಾಹಿತಿ ತಂತ್ರಜ್ಞಾನ ನಿಪುಣೆ,
ಪ್ರವೃತ್ತಿಯಲ್ಲಿ ಶಿಕ್ಷಕಿಯಾಗಿ ಹರಿದಾಸಿನಿಯಾಗಿರುವ
ಶ್ರೀಮತಿ ಸೌಮ್ಯಾಪ್ರವೀಣರವರ ಲೇಖನ

## ಅಕ್ಷರವಿಜ್ಞಾನದ ಬಿತ್ತರ ಮನೋವಿಜ್ಞಾನದ ಎತ್ತರ

ಜೀವನವೇ ಭಗವಂತನ ಒಲುಮೆಗಾಗಿ ಮಾಡುವ ಯಜ್ಞ ಎಂದು ಪ್ರತಿಪಾದಿಸುವ ಕೃತಿಯಿದು. ಸಪ್ತಧಾತು ನಿರ್ಮಿತ ಶರೀರವೇ ರಾಮನ ಪೂಜೆಗೆ ಸಾಧನವಾಗಿರುವ ವೀಣೆಯಾಗಿದೆ. ಇಲ್ಲಿನ ಸಪ್ತ ನಾಡೀ ಕೇಂದ್ರಗಳೇ ಮನೋಮಯ ಕೋಶದ ಕಾರ್ಯಕ್ಷೇತ್ರ. ತನ್ನದೆನ್ನುವ ಸರ್ವಸ್ವವನ್ನೂ ಭಗವಂತನಿಗೇ ಒಪ್ಪಿಸುವ ಮನೋವಿಜ್ಞಾನದಲ್ಲಿ ತತ್ವಜ್ಞಾನದ ಪರಾಕಾಷ್ಠತೆಯಿದೆ.

ಭಕ್ತಿಯಿಂದ ಹಾಡಿದಾಗ ಅಂತಃ ಸುಖದ ಅನುಭವವಾಗುತ್ತದೆ. ತಾತ್ವಿಕ ವಿವೇಚನೆಯಿಂದ ಕೃತಿಯ ಸ್ವರೂಪವನ್ನು ಕಂಡಾಗ ಮನಸ್ಸನ್ನು ನಿಜಸ್ವರೂಪದಲ್ಲಿ ನೆಲೆಗೊಳಿಸುವ ಮನೋವಿಜ್ಞಾನ ಸಾರದ ಅಭಿವ್ಯಕ್ತಿಯಿದೆ. ಶ್ರೇಷ್ಠ ಭಕ್ತನಿಗೆ ಇಂದ್ರಿಯಗಳೇ ಭಗವಂತನ ಆರಾಧನೆಗೆ ಮಾಧ್ಯಮವಾಗುವುವು.

ಬದುಕಿನ ತತ್ವ ನಿರೂಪಣೆ ದಟ್ಟವಾಗಿ ವ್ಯಾಪಿಸಿಕೊಂಡು ಗಮನ ಸೆಳೆಯುತ್ತದೆ. ಆಚರಣಾತ್ಮಕ ತತ್ವಗಳನ್ನು ಮನೋಮಯ ಕೋಶದ ಕಾರ್ಯವೈಖರಿಯು ತೋರುತ್ತದೆ. ದಾಸರ ಜೀವನ ಮುಖಿ, ಕೀರ್ತನೆಯ ಆಕಾರದಲ್ಲಿ ಶಿಷ್ಟಗುಣಗಳ ಪ್ರತಿನಿಧಿಯಾಗಿ ಅಭಿವ್ಯಕ್ತಿಯಾಗಿದೆ.

ಸ್ವಭಾವವನ್ನು ಪ್ರತಿಬಿಂಬಿಸುವ ವರ್ತನೆಯಲ್ಲಿ ನುಡಿ - ನಡೆಗಳ ಸಾಮರಸ್ಯವೇ ಮೆರೆದಿದೆ. ಮನೋನಿಯಂತ್ರಣವೇ ದಮ ಎಂಬ ಸಂದೇಶವಿದೆ.

ಸರ್ವಸಮರ್ಪಣಭಾವದ ನೆಲೆಯಲ್ಲಿ ಭಕ್ತನ ಮನೋವ್ಯಾಪಾರಗಳೆಲ್ಲವೂ ಪರಮಾತ್ಮನಲ್ಲಿ ಲೀನವಾಗಿರುವದು. ಹೀಗೆ ಸರ್ವಕ್ರಿಯೆ ಪ್ರತಿಕ್ರಿಯೆಗಳೆಲ್ಲವೂ ಭಗವನ್ಮಯವಾಗಿರುತ್ತವೆ.

ಮನಸ್ಸಿನ ದೃಢತೆ, ಶಾರೀರಿಕ ಆರೋಗ್ಯ ಇದ್ದವರು ಜೀವನದ ಗುರಿಮುಟ್ಟಬಲ್ಲರು. ವ್ಯಕ್ತಿಯು ಅನುಷ್ಠಾನದಿಂದ ಶುದ್ಧ ಚಾರಿತ್ರ್ಯಶೀಲನಾಗಬಲ್ಲನು . ಅಂಗಾಂಗಗಳ ಕ್ರಿಯಾಧರ್ಮದಲ್ಲಿ ಮನೋಧರ್ಮದ ಅಚ್ಚರಿಯ ಜಾಲವಿದೆ.

ಈ ದಿಶೆಯಲ್ಲಿ ನಮ್ಮ ಯುವಪೀಳಿಗೆಯನ್ನು ನಿರ್ಮಾಣ ಮಾಡುವ ಹೊಣೆಗಾರಿಕೆಯಲ್ಲಿ ನಾವೆಲ್ಲ ನಿರತರಾಗಬೇಕೆಂಬ ಎಚ್ಚರ ನೀಡುವ ಶ್ರೀಪಾದರಾಜರ ಉಪಕಾರ ಸ್ಮರಣೆಯೇ ಅವರ ಆರಾಧನೆಯೆಂಬೋಣ.

**ವಿಳಾಸ: ನಂ 48, 1ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬನಗಿರಿನಗರ, ಬೆಂಗಳೂರು-85**

ಹರಿದಾಸ ಸಾಹಿತ್ಯವನ್ನು ಸುಮಾರು ದಶಕಗಳಿಂದ ಅಭ್ಯಸಿಸುತ್ತಿರುವ ಹಾಗೂ ದಾಸ ಸಾಹಿತ್ಯದ ಪುಸ್ತಕಗಳನ್ನು ಬರೆದು ಪ್ರಕಟಪಡಿಸಿದ ಬಿಜಾಪುರದ **ಸೌ|| ಶೋಭಾ ವ. ಕುಲಕರ್ಣಿ**ಯವರ ಲೇಖನ.

## ನಿತ್ಯಚರ್ಯೆಗಳಲ್ಲಿ ಬದುಕಿನ ಶೋಭೆ

ಶ್ರೀಪಾದರಾಜರು ಈ ಕೀರ್ತನೆಯಲ್ಲಿ ಶ್ರೀ ಮಧ್ವಾಚಾರ್ಯರ ತತ್ವವನ್ನೇ ಅನುಸರಿಸಿದ್ದಾರೆ ಎಂದು ಶ್ರೀ ವರದರಾಜಾರಾಯರು ಹೇಳಿರುವರು. ತಮ್ಮನ್ನು ತಾವೇ ಭಗವಂತನಿಗೆ ಸಮರ್ಪಿಸಿಕೊಂಡಿರುವ ಹರಿದಾಸರಿಗೆ ತಾವು ಕೈಕೊಳ್ಳುವ ಸಮಸ್ತ ಕಾರ್ಯವೂ ಪರಮಾತ್ಮನ ಕೈಂಕರ್ಯವೆನ್ನಿಸುವದು. ಅದಕ್ಕಾಗಿ **''ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ''** ಎಂಬ ಅನುಪಲ್ಲವಿ ತುಂಬ ಅರ್ಥವತ್ತಾಗಿದೆ.

ಈ ಕೀರ್ತನೆಯಲ್ಲಿ ಹರಿಭಕ್ತನ ನಿತ್ಯಚರ್ಯೆಗಳನ್ನೆಲ್ಲಾ ವರಿಸಿದೆ. ಆತನ ಸ್ನಾನ ಸಂಧ್ಯಾವಂದನೆ ಮೊದಲ್ಗೊಂಡು ಭೋಗಾದಿಗಳೆಲ್ಲ ಭಗವಂತನಿಗೇ ಮೀಸಲು ಎಂಬ ದೃಷ್ಟಿ ಗಹನವಾಗಿದೆ.

ಗೀತೆಯ ಒಂದು ಶ್ಲೋಕದ ತತ್ವವು ಇಲ್ಲಿ ಅಡಕವಾಗಿದೆ. ನಮ್ಮ ಶರೀರದಲ್ಲಿ ಅಭಿಮಾನಿ ದೇವತೆಗಳೆನ್ನಿಸಿ ಆಯಾ ಇಂದ್ರಿಯದ ಕಾರ್ಯಗಳನ್ನು ನಿರ್ವಸುತ್ತಿರುವ ಇಪ್ಪತ್ತುನಾಲ್ಕು ತತ್ವಗಳಿಗೆ ಶ್ರೀಹರಿಯೇ ಮುಖ್ಯ ಪ್ರೇರಕನು. ಜೀವೋತ್ತಮರಾದ ವಾಯುದೇವರಿಗೂ, ದೇವೋತ್ತಮನಾದ ಶ್ರೀಹರಿಯೇ ಪ್ರಧಾನ ನಿರ್ವಾಹಕನು.

ಶ್ರೀಹರಿ, ಜೀವಿಗಳ ಕೈಯಿಂದ ನಾನಾ ಕರ್ಮಗಳನ್ನು ಮಾಡಿಸುವನಾದಾಗ್ಯೂ ಅವನು ಆ ಕರ್ಮಫಲಕ್ಕೆ ಹೊಣೆಯಾಗುವದಿಲ್ಲವೆಂದು ಒಮ್ಮೊಮ್ಮೆ ಹೇಳುವುದುಂಟು. ಆದರೆ ಶುಭಫಲ ಪ್ರಾಪ್ತವಾಗುವಲ್ಲಿ ಅದನ್ನು ಮಾತ್ರ ಸ್ವೀಕರಿಸುವನು ಎಂದು ಎರಡನೆಯ ನುಡಿಯಲ್ಲಿ ಪ್ರತಿಪಾದಿಸಿದ್ದಾರೆ. ಕಡೆಯ ನುಡಿಯಲ್ಲಿ ಶ್ರೀವಿಷ್ಣುವಿನ ರೂಪಮಹಾತ್ಮೆಯನ್ನು ತಿಳಿಸಿ, ತಮ್ಮನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡಿದ್ದಾರೆ.

**ವಿಳಾಸ: ನಂ. 104, ರಮಣಜ್ಯೋತಿ ಅಪಾರ್ಟ್‌ಮೇಂಟ್ಸ್ ತುಮಕೂರು ರಸ್ತೆ, ಬೆಂಗಳೂರು-22**





**ಸುಲಭ ಪೂಜೆಯ ಮಾಡಿ ಬಲವಿಲ್ಲದವರು** ಎಂದು ಪುರಂದರದಾಸರು ಸುಲಭ ಪೂಜೆಯ ವಿಧಾನ ತಿಳಿಸಿದ್ದಾರೆ. ಇರುಳು ಹಚ್ಚುವ ದೀಪವೇ ಹರಿಗೆ ನೀರಾಜನ, ಮರೆಮಾಡುವ ವಸ್ತ್ರವೇ ಪರಮ ಮಡಿ, ತಿರುಗಾಡಿ ದಣಿಯುವುದೇ ಶ್ರೀಹರಿಗೆ ಪ್ರದಕ್ಷಿಣೆ, ಹೊರಳಿಮಲಗುವುದೇ ವಂದನೆ, ಉರುಳು ಸೇವೆ ನುಡಿದ ಮಾತುಗಳೇ ಕಡಲಶಯನನ ಜಪ, ಮಡದಿ ಮಕ್ಕಳೇ ಶ್ರೀಹರಿಯ ಪರಿವಾರ, ತೀರ್ಥಯಾತ್ರೆ ಮಾಡಲಿಲ್ಲವೆಂದು ಕೊರಗಬೇಡಿ, ನಮ್ಮ ಮನೆಯ ನಡುಮನೆ ಅಂಗಳಗಳೇ ಉಡುಪಿ-ತಿರುಪತಿ, ಎಡ ಬಲದ ಮನೆಯವರೇ ಕಡುಭಾಗವತರು ಎಂದು ಪುರಂದರದಾಸರು ವ್ಯಾಸರಾಯರ ವಿಚಾರಗಳಿಗೆ ಮತ್ತಷ್ಟು ಒತ್ತು ನೀಡಿದ್ದಾರೆ. ಮಾನವಿ ಜಗನ್ನಾಥದಾಸರ ಪ್ರಕಾರ

**ವಾರಿಜ ಭವಾಂಡವೆ ಸುಮಂಟಪ|**
**ಮೇರು ಗಿರಿಸಿಂಹಾಸನವು ಭಾ**
**ಗೀರಥಿಯೇ ಮಜ್ಜನವು ದಿಗ್ವಸ್ತ್ರಗಳು ನುಡಿಮಂತ್ರ|**
**ಭೂರುಹಜ ಫಲಪುಷ್ಪ ಗಂಧಸ|**
**ಮೀರ ಶಶಿರವಿ ದೀಪ ಭೂಷಣ|**
**ತಾರಕೆಗಳೆಂದರ್ಪಿಸಲು ಕೈಕೊಂಡು ಮನ್ನಿಸುವ|| (ಹ. ಸಾರ:5-28)**

**ಏನು ಮಾಡುವ ಕರ್ಮಗಳು ಲಕು|**
**ಮೀನಿವಾಸನಿಗರ್ಪಿಸನು ಸಂ|**
**ಧಾನ ಪೂರ್ವಕದಿಂದ ಸಂದೇಹಿಸದೆ ದಿನದಿನದಿ|**
**ಮಾನ ನಿಧಿ ಕೈಕೊಂಡು ಸುಖವಿ|**
**ತ್ತಾನತರ ಸಂತೈಪ ತೃಣ ಜಲ|**
**ಧೇನು ತಾನುಂಡನವರತ ಪಾಲ್ಗರೆವ ತೆರನಂತೆ|| (ಹ. ಸಾರ:5-38)**

ನಮ್ಮ ಜೀವನದ ಉಜ್ಜೀವನ ಮೌಲ್ಯಾಧಾರಿತವಾದುದು. ನಾವು ಆಚರಿಸುವ ನಿತ್ಯ ವಿಧಿಗಳು ಭಗವಂತನ ಪೂಜೆಯೆಂದು ಜಾಗೃತಿ ಮೂಡಿಸುವ ಕೃತಿಯಿದು. ಭಗವಂತ ನಮಗೆ ಅನುಗ್ರಹಿಸಿದ ಸಕಲ ಸಂಪತ್ತುಗಳೂ ಅವನ ಆರಾಧನೆಗೇ ಮೀಸಲು ಎಂದು ಸಾರುವ ಕೃತಿಯಲ್ಲಿ ಸಾರ್ಥಕ ಬದುಕಿನ ಸೂತ್ರಗಳನ್ನು ಕೀರ್ತಿಸಿದ್ದಾರೆ.

**ವಿಳಾಸ: ನಂ. 333, 12ನೇ ಮುಖ್ಯರಸ್ತೆ, ಗೋಕುಲ ಬಡಾವಣೆ, ಮತ್ತಿಕೆರೆ, ಬೆಂಗಳೂರು-54**

ರಂಗವಿಠಲ ಪತ್ರಿಕೆಯ ನಿರಂತರ ಶ್ರದ್ಧೆ-ಆಸಕ್ತಿಯಿಂದ ಲೇಖನ ಅಧ್ಯಯನ ಸಿದ್ಧಪಡಿಸುತ್ತಾ ಬಂದಿರುವ ಧಾರವಾಡದ ಖ್ಯಾತ ಲೇಖಕಿ **ಡಾ|| ಆರ್. ಲಕ್ಷ್ಮಿ** ಇವರ ಲೇಖನ.

## ಆಚರಣಾತ್ಮಕ ತತ್ವಚಿಂತನೆ ಮೂಡಿಸುವ ಕೃತಿ

ಈ ಕೃತಿಯಲ್ಲಿ ಶ್ರೀಪಾದರಾಜರು ಹರಿದಾಸರು ಕೈಕೊಳ್ಳುವ ಎಲ್ಲ ಕಾರ್ಯವೂ ಪರಮಾತ್ಮನ ಸೇವೆ ಎಂದು ಭಾವಿಸಿ ತಮ್ಮನ್ನು ತಾವೇ ಭಗವಂತನಿಗೆ ಸಮರ್ಪಿಸಿಕೊಂಡಿರುವ ಸಮರ್ಪಣ ಭಾವ ಕಂಡುಬರುತ್ತದೆ. **ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ** ಎಂಬ ಅನುಪಲ್ಲವಿ ಇಲ್ಲಿ ತುಂಬಾ ಅರ್ಥವತ್ತಾಗಿ ತೋರಿ ಬಂದಿದೆ.

ಮೊದಲನೆಯ ನುಡಿಯಲ್ಲಿ ಹರಿಭಕ್ತನು ಪ್ರತಿದಿನ ಮಾಡುವ ನಿತ್ಯ ಚರ್ಯೆಗಳ ವಿವರಣೆಯಿದೆ. ಆತನ ಸ್ನಾನ, ಸಂಧ್ಯಾವಂದನೆಗಳು ಮೊದಲ್ಗೊಂಡು ಭೋಗಾದಿಗಳೆಲ್ಲ ಭಗವಂತನಿಗೆ ಮೀಸಲು ಎಂಬ ಗಹನ ವಿಚಾರ ಇಲ್ಲಿ ಕಂಡು ಬಂದಿದೆ.

**ಸರ್ವೇಂದ್ರಿಯಗಳಲ್ಲಿರುವ ಶರ್ವಾದಿ ದೇವರ್ಕಳಿಗೆ ಸರ್ವ ಚೇಷ್ಟಾಪ್ರದನಾದ ಪ್ರಾಣಗೆ ನಿರ್ವಾಹಕನಾಗಿ ನಮ್ಮ ಶರೀರದಲ್ಲಿ ಅಭಿಮಾನಿ ದೇವತೆಗಳೆನ್ನಿಸಿ ಆಯಾ ಇಂದ್ರಿಯದ ಕಾರ್ಯಗಳನ್ನು** ನಿರ್ವಹಿಸುತ್ತಿರುವ ಇಪ್ಪತ್ತನಾಲ್ಕು ತತ್ವಗಳಿಗೆ ಶ್ರೀಹರಿಯೇ ಮುಖ್ಯಪ್ರೇರಕನು ಎಂಬ ತತ್ವ ನಿರೂಪಣೆಯಿದೆ. ಜೀವೋತ್ತಮರಾದ ವಾಯುದೇವರಿಗೂ ದೇವೋತ್ತಮನಾದ ಶ್ರೀಹರಿಯೇ ಪ್ರಧಾನ ನಿರ್ವಾಹಕನೆಂಬ ವಿಷಯ ನಿರೂಪಿಸುತ್ತಾ ಶ್ರೀಹರಿ ಜೀವಿಗಳ ಕೈಯಿಂದ ನಾನಾ ಕರ್ಮಫಲಕ್ಕೆ ಹೊಣೆಯಾಗುವದಿಲ್ಲ.

ಮೂರನೆಯ ನುಡಿಯಲ್ಲಿ ಕರ್ಮಗಳನ್ನು ಮಾಡಿಸುವವನಾಗಿದ್ದರೂ ಶ್ರೀವಿಷ್ಣುವಿನ ರೂಪ ಮಹಾತ್ಮ್ಯೆಯನ್ನು ತಿಳಿಸಿ ಭಗವಂತನೇ ತಮ್ಮನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡಿದ್ದಾರೆ. ಒಟ್ಟಾರೆ **ನಿನ್ನ ಪೂಜೆಯೊ - ರಾಮ, ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ -** ಎಂಬಲ್ಲಿ ದಿನನಿತ್ಯ ಮಾಡುವ ಕರ್ಮಗಳೆಲ್ಲ ಭಗವಂತನಿಗೇ ಅರ್ಪಿತವಾದುದು. ಸ್ನಾನ, ಜಪ, ತಪ, ವ್ರತ ಮೊದಲಾದವುಗಳು ಸಾರ್ಥಕವೆನಿಸಿ ಅವನ ಅಪೇಕ್ಷೆ ಮುಕ್ತಿಯ ರೂಪದಲ್ಲಿ ಫಲಪ್ರದವಾಗುವದು ಮತ್ತು ಸರ್ವಾರ್ಪಣ ಭಾವದಿಂದ ಬಾಳು ಹೇಗೆ ಕೃತಾರ್ಥವಾಗುವದೆಂಬ ಅರ್ಥಪೂರ್ಣ ಅಭಿಪ್ರಾಯವಿದೆ.

**ವಿಳಾಸ: ಸಂಸ್ಕೃತ ಉಪನ್ಯಾಸಕರು, ಮಹಿಳಾ ಮಹಾವಿದ್ಯಾಲಯ, ಧಾರವಾಡ**





ನಿರಂತರ ರಂಗವಿಠಲ ಪತ್ರಿಕೆಗೆ ಶ್ರದ್ಧಾಪೂರ್ಣ ಲೇಖಕಿಯರಾದ ವಿದೂಷಿ ವಿಜಯಲಕ್ಷ್ಮೀ ರಾಘವೇಂದ್ರರಾವ್ ಅವರ ಲೇಖನ

## ವೈವಿಧ್ಯತೆಯ ಶೃಂಗಾರದಲಿ ಜೀವನದ ಯಜ್ಞ

ಹದಿನೈದನೆಯ ಶತಮಾನದಲ್ಲಿ ಗುರುವರ್ಯ ಶ್ರೀಪಾದರಾಜರು **ನಿನ್ನ ಪೂಜೆಯೋ ರಾಮ, ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ** ............... ಎಂದು ಹರಿಪೂಜೆಯ ಅನುಸಂಧಾನ ವಿಧಾನಗಳನ್ನು ತೋರಿಸಿಕೊಟ್ಟಿದ್ದಾರೆ. ಅದೇ ರೀತಿ ವ್ಯಾಸರಾಯರ ಪ್ರಮುಖ ಶಿಷ್ಯರೆನಿಸಿದ ಶ್ರೀಪುರಂದರದಾಸವರೇಣ್ಯರು **ಗಂಧವ ಪೂಸಿ ತಾಂಬೂಲವ ಮೆಲುವಾಗ-ಮಂದಗಮನೆ ಕೂಡ ಸರಸವಾಡುತಲೊಮ್ಮೆ, ಪರಿಪರಿಕೆಲಸದೊಳೊಂದು ಕೆಲಸವೆಂದು - ಭೋಗಪಡೆದು ಅನುರಾಗದಿಂದಿರುವಾಗ, ಕೃಷ್ಣಾಯೆನಬಾರದೇ** ಎಂದು ದಿನನಿತ್ಯದ ದಿನಚರಿಯಲ್ಲಿ ಯಾವಾಗ, ಹೇಗೆ, ಶ್ರೀಹರಿ ಸ್ಮರಣೆ ಮಾಡಬೇಕು ಎನ್ನುವುದನ್ನು ಹೇಳಿದ್ದಾರೆ.

ಹದಿನೈದು-ಹದಿನಾರನೆಯ ಶತಮಾನದಲ್ಲಿ ಕನಕದಾಸರ ದೈವ ಚಿಂತನೆಯೂ ಇದೇ ಹಾದಿಯಲ್ಲಿದೆ. **ಸವಿನುಡಿ ವೇದಪುರಾಣಶಾಸ್ತ್ರಗಳು ಕಿವಿಯಿಂದ ಕೇಳುವ ಕಥೆ ನಿನ್ನದೋ, ನವಮೋಹನಾಂಗೀಯರ ರೂಪವ ಕಣ್ಣಿಂದ ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ, ಒಡಗೂಡಿ ಗಂಧ ಕಸ್ತೂರಿ ಪರಿಮಳಗಳು ಬಿಡದೆ ಲೇಪಿಸಿಕೊಂಬೋದು ನಿನ್ನದೋ, ನ್ಯಾಯದಿ ಕನಕನೊಡೆಯ ಆದಿಕೇಶವರಾಯ ನೀನಲ್ಲದೆ ನರರು ಸ್ವತಂತ್ರರೆ** ಎಂತಹ ಸರ್ವಸಮರ್ಪಣೆ !

ಇನ್ನು ಹದಿನೆಂಟನೆಯ ಶತಮಾನ ಕಂಡ ಪಂಡಿತೋತ್ತಮ ಜಗನ್ನಾಥದಾಸರಂತೂ ತಮ್ಮ ಕನ್ನಡದಸುಧಾ, ಎನಿಸಿದ ಹರಿಕಥಾಮೃತಸಾರದ ಸರ್ವಪ್ರತೀಕಸಂಧಿಯಲ್ಲಿ **ಶ್ರೀವರನಿಗಭಿಷೇಕವೆಂದರಿದು ಈ ವಸುಂಧರೆಯೊಳಗೆ ಬಲ್ಲವರು ಆವ ಜಲದಲಿ ಮಿಂದರೆಯು** ಎಂದು ಹರಿಪಾದೋದ್ಭವೆ ಗಂಗೆಯನ್ನು ಭಕ್ತರಿರುವಲ್ಲಿಗೇ ತಂದು ಶ್ರೀಹರಿಸಾನಿಧ್ಯವನ್ನು ಪ್ರಕಟಗೊಳಿಸಿದ್ದಾರೆ.

ಶತಶತಮಾನಗಳ ಹಾದಿಯಲ್ಲಿ ಸಾಗಿ ಬಂದ ಹರಿದಾಸಾಗ್ರಣಿಗಳೆಲ್ಲರೂ ಹರಿಭಕ್ತಿಸುಧೆ ಸಂಸ್ಕೃತಿಯನ್ನು ಕೀರ್ತನೆಯ ಅತಿಸುಂದರ ಅಕ್ಷರ ಶಿಲ್ಪಗಳಿಂದ ನಿರ್ಮಿಸಿದ್ದಾರೆ. ಆಧ್ಯಾತ್ಮಿಕ ಚಿಂತನೆಯ, ಸುಂದರ ಭಾವನೆಗಳ ಆಭರಣವನ್ನು ತೊಡಿಸಿ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ಕೊಟ್ಟಿದ್ದಾರೆ. ಅದನ್ನು ಉಳಿಸಿ, ಬೆಳೆಸಿ, ಪೋಷಿಸಿ, ಸಮಾಜ ಪ್ರಪಂಚಕ್ಕೆ ಹಸ್ತಾಂತರಿಸುವ ಹೊಣೆ ನಮ್ಮದು.

**ವಿಳಾಸ: 51/ಡಿ, ವಿಶ್ವಗಿರಿ, ಹೊಸ ಬಾದಾಮಿನಗರ, ಕೇಶ್ವಪುರ ಹುಬ್ಬಳ್ಳಿ - 580023**

ಆಕ್ಸಿಜನ್ ನಂತಹ ಸೂಕ್ಷ್ಮವಸ್ತುಗಳ ವಾಣಿಜ್ಯ ತಜ್ಞರು,
ಬೆಂಗಳೂರಿನ **ಶ್ರೀನಾಥ್ ಕೊನೇಟಿಯವರ**
ಲೇಖನ.

## ಕೃತಿಯ ಸ್ವರೂಪ - ತತ್ವವಿವೇಚನೆ ಸೌರಭ

ಲೌಕಿಕರಾದ ನಮ್ಮೆಲ್ಲರಿಗೂ ಪೂಜೆ - ನಮಸ್ಕಾರಗಳನ್ನು ತಪ್ಪದೇ ಆಚರಿಸಬೇಕೆಂಬ ಹಂಬಲವಿದೆ. ಆದರೆ, ಇಂದಿನ ವೇಗದ ಜೀವನ ಶೈಲಿಯಲ್ಲಿ ಸಮಯ - ಸಂಯಮದ ಅಭಾವ ಕಾಡುತ್ತದೆ. ಹೀಗಾಗಿ ನಮ್ಮ ಹಿರಿಯರು ಮಾಡುತ್ತಿದ್ದ ಸುದೀರ್ಘ ಪೂಜೆಯನ್ನೇ ಮಾಡಬೇಕೆ? ಅಥವಾ ಸಮಯ ಹೊಂದಾಣಿಕೆಯಂತೆ ಸಂಕ್ಷಿಪ್ತ ಪೂಜೆ ಮಾಡಿದರೆ ಸಾಕೆ? ಸಂಕ್ಷಿಪ್ತವೆಂದರೆ - ಸುದೀರ್ಘವನ್ನು ಸಂಕ್ಷಿಪ್ತಮಾಡಲು - ಕಾರ್ಯಾಚರಣೆಯಲ್ಲಿ ಕಡಿತಮಾಡಬೇಕು. ಯಾವ ಭಾಗವನ್ನು ಕಡಿತಮಾಡಬೇಕು? ಎಂಬ ದ್ವಂದ್ವ, ಸಂಶಯಗಳ ಸುಳಿಯಲ್ಲಿ ಸಿಕ್ಕಿದ್ದೇವೆ .

ಇಂತಹ ಸಂದಿಗ್ಧಕ್ಕೆ ಸಿಲುಕಿದ ಪಾಮರರಿಗೆ, ಶ್ರೀ ಶ್ರೀಪಾದರಾಜರ ಈ ಕೃತಿ ಸಮಾಧಾನ ಕೊಡುತ್ತದೆ, ಕೃತಿಯಲ್ಲಿ ಹೇಳಿರುವಂತೆ ನಾವು ಈ ದೈನಂದಿನ ಆಚಾರಪಾಲನೆಗಾಗಿ ಮಾಡುವ ಎಲ್ಲಕಾರ್ಯಗಳ ಗೀತೆಗಳು, ದೇವರನಾಮ ಅಥವಾ ದಾಸರಕೃತಿಗಳಿರಬಹುದು, ಎಲ್ಲವನ್ನೂ ಹರಿಯ ಪೂಜೆಯೆಂದು ತಿಳಿದು ಆಚರಿಸಬೇಕು. ಜೀವನ ನಿರ್ವಹಣೆಗೆ ಮಾಡಬೇಕಾದ ಕಾರ್ಯಗಳನ್ನು ಪೂಜೆಯೆಂದೇ ಭಾವಿಸಬೇಕು.

ಆದರೂ ಇದಾವುದೂ, ನಾವು ಮಾಡುವುದಲ್ಲ, ಶ್ರೀಹರಿಯೇ ನಮ್ಮ ಪ್ರಾಣ ನಿರ್ವಾಹಕನಾಗಿ ಮಾಡಿಸುವ ಕ್ರಿಯೆ. ಇಂತಹ ಅನುಸಂಧಾನದಿಂದ ನಮ್ಮ ಸಕಲ ದಿನಾಚರಣೆಯನ್ನೂ, ಸುರರು, ಮಹಾಲಕ್ಷ್ಮೀ, ಪವಿತ್ರ ಗಂಗೆಯನ್ನೊಳಗೊಂಡ ಪರಮಾತ್ಮನು ಮಾನ್ಯ ಮಾಡುತ್ತಾನೆ.

ಶ್ರೀವಿಜಯದಾಸರೂ ಸಹ ತಮ್ಮ ಒಂದು ಕೃತಿಯಲ್ಲಿ ಇದನ್ನೇ ಹೇಳುತ್ತಾರೆ.

**ಸಕಲ ಕಾಲದಿ ಮಾಡಿದ ಕರ್ಮವೂ।**
**ಭಕುತಿಯಿಂದಲಿ ಬಂದರ್ಪಿತವೆನ್ನಿ ಉಡುಪಿಯಲಿ ॥**

ಹೀಗೆ ಪ್ರಾರಂಭವಾಗುವ ಪೂಜೆ, ಕಾಲಕ್ರಮೇಣ ವಿಸ್ತಾರವಾಗಿ, ಇತರ ಚಟುವಟಿಕೆಗಳು ಕಡಿಮೆಯಾಗುತ್ತಾ, ಪೂಜಾ ಅವಧಿ ಹೆಚ್ಚುತ್ತಾ ಹೋಗುತ್ತದೆ. ಈ ರೀತಿಯಲ್ಲಿ ಅತಿ ಸಾಮಾನ್ಯರಿಗೂ, ಜೀವನ ಸಾರ್ಥಕ ಮಾಡಿಕೊಳ್ಳಲು ಅತ್ಯಂತ ಸುಲಭ ಮಾರ್ಗಗಳನ್ನು ತೋರಿಸಿಕೊಟ್ಟಿರುವ ಹರಿದಾಸರುಗಳಿಗೆ ನಮೋನಮಃ

**ಲೇಖಕ: ನಂ. 149/ವೈ 50ನೇ ಅಡ್ಡರಸ್ತೆ, 3ನೇ ಹಂತ ರಾಜಾಜಿನಗರ ಬೆಂಗಳೂರು.**





ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿಗಳಾದ,
ರಾಯಚೂರು ನಿವಾಸಿಗಳಾದ
**ನರಸಿಂಹರಾವ್ ದೇಶಪಾಂಡೆಯವರ** ಲೇಖನ.

## ಸರ್ವ ಸಮರ್ಪಣಾ ಭಾವ

ನಮ್ಮ ಪಂಚ-ಜ್ಞಾನೇಂದ್ರಿಯಗಳಿಂದ, ಪಂಚಕರ್ಮೇಂದ್ರಿಯಗಳಿಂದ ಮತ್ತು ಪಂಚತನ್ಮಾತ್ರಗಳಿಂದ ನಾವು ಮಾಡುವ ನಿತ್ಯ ಕರ್ಮಾನುಷ್ಠಾನಗಳು ಸ್ನಾನ, ಜಪ ಸಂಧ್ಯಾವಂದನೆ, ನವವಿಧ ಭಕ್ತಿಯಿಂದ ಮಾಡುವ ಶ್ರೀಹರಿಪೂಜೆ ದೇವಯಜ್ಞ, ಬ್ರಹ್ಮಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ ಮತ್ತು ಭೂತಯಜ್ಞ ಇತ್ಯಾದಿಗಳು ಶ್ರೀಹರಿಗೆ ಸರ್ವಸಮರ್ಪಿತವು. ಅಗ್ನಿಯಲ್ಲಿ ಒಳ್ಳೆಯ ವಸ್ತುಗಳನ್ನಾಗಲಿ ಅಥವಾ ಕೆಟ್ಟವಸ್ತುಗಳನ್ನಾಗಲಿ ಹೋಮಿಸಿದರೆ ಸಮನಾಗಿ ಸುಡುವಂತೆ, ಶ್ರೀಹರಿಯು ನಾವು ಮಾಡುವ ಪಾಪ ಪುಣ್ಯ ಕಾರ್ಯಗಳನ್ನು ಸಮನಾಗಿ ಸ್ವೀಕರಿಸುತ್ತಾನೆ.

ಶ್ರೀಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದ ಕ್ರೀಡಾ ವಿಲಾಸ ಸಂಧಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ.

**ಜ್ಞಾನ ಕರ್ಮೇಂದ್ರಿಯಗಳಿಂದೇ**
**ನೇನು ಮಾಡುವ ಕರ್ಮಗಳು ಲ**
**ಕ್ಷ್ಮೀನಿವಾಸಗನಿರ್ಪಸುತ್ತಿರು ಕಾಲಕಾಲದಲಿ।**
**ಪ್ರಾಣಪತಿ ಕೈಗೊಂಡು ನಾನಾ**
**ಯೋನಿಯೈದಿಸನೊಮ್ಮೆ ಕೊಡದಿರೆ**
**ದಾನವರು ಸೆಳೆದೊಯ್ವರೆಲ್ಲಾ ಪುಣ್ಯರಾಶಿಗಳ॥ (ಹ. ಸಾರ:18-35)**

ಕಾಲಕಾಲಕ್ಕೆ ಪ್ರತಿ-ನಿತ್ಯದಲ್ಲಿ ಎಲ್ಲ ಕರ್ಮ ಮಾಡುವಾಗ್ಗೆ ಹರಿಸ್ಮರಣೆಯಿಂದ ಲಕ್ಷ್ಮೀ ನಾಥನಿಗೆ ಅರ್ಪಿಸಲು ಶ್ರೀ ಪ್ರಾಣ ಲಕ್ಷ್ಮಿಯರಲ್ಲಿ ನಿಂತು ಸಕಲ ಕಾರ್ಯ ಮಾಡಿ ಮಾಡಿಸಿ ಶ್ರೀರಮಾಂತರ್ಯಾಮಿ ಬಿಂಬರೂಪಿ ಹರಿಗೆ, ಸ್ವಾಮಿ **ನೀನು ಮಾಡಿದ್ದು ನಿನಗೆ ಒಪ್ಪಿತೋ ದೇವ** ಎಂದು ಆತನಿಗೆ ಒಪ್ಪಿಸಬೇಕು. ಹೀಗೆ ಪುಣ್ಯಪಾಪಗಳನ್ನು ಒಪ್ಪಿಸದಿದ್ದರೆ ಎಲ್ಲ ಪುಣ್ಯರಾಶಿಗಳನ್ನೂ ದಾನವರು ಸೆಳೆದೊಯ್ಯುವರು.

**ಯತ್‌ಕರೋಷಿ, ಯದಶ್ನಾಸಿ, ಯಜ್ಜುಜ್ಜ ಹೋಸಿ ದದಾಸಿಯತ್ । ಯತ್ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಮ್** ಎಂಬ ಗೀತಾ ವಚನದಂತೆ ಕಾಲಕಾಲದಲ್ಲಿ ಮಾಡುವ ಸಕಲಕರ್ಮಗಳನ್ನೂ ಶ್ರೀಹರಿಯ ಅಡಿದಾವರೆಗಳಲ್ಲಿ ಸಮರ್ಪಿಸಬೇಕು.

**ನಾನೇ ಸರ್ವಕರ್ತಾನೆಂಬ ತಮಸಿ, ನಾನೇ ಹರಿಯಾಚನೆ**
**ಮಾಳ್ಪನೆಂಬನೆ ಬದ್ಧ, ನಾನು ಪಾಪಕರ್ತಾ ಪುಣ್ಯಕೆ**
**ಹರಿಯೆಂಬ ನುಡಿವವನು ಸತ್ವಗುಣನು ।**
**ನಾಣ್ಯತಕ್ಕೆ ಸಲ್ಲ ಹರಿ ನಿನ್ನೆಂದೆಲ್ಲ ।**
**ನಾನಾತ್ಮಗಳಿಂದ ಬಗೆಬಗೆ ವೈಷಣ್ಯ ।**
**ಏನೇನು ಮಾಡಿಸುವೆ ಮಾಡುವೆನದರಂತೆ ।**
**ಹೀನ ಹೇಸುಗಳಲ್ಲಿ ಹಿತಾಹಿತದಲ್ಲಿ ।**
**ಮಾಣದೇ ಮರಿಯದಲೇಯೆಂದನ**
**ಸ್ವಾನುಭವಕೆ - ನಿತ್ಯ ತಂದು ಕೊಡುವ ಮನಕೆ**
**ಅನರತರ ವಿತೇಜ ವಿಜಯ ವಿಠಲನ್ನ ।**
**ಕಾಣುತ ತಿರುಗುವ ನಿರ್ದೋಷ ಎನುತಾ ।**
**ಸಾಧಾರಣಾ ಸಾಧರಣ ಹರಿಗೆ ಒಪ್ಪಿಸಿ ಕೊಟ್ಟು ।**
**ಮೋದದಲ್ಲಿರುವ ವಿಜಯ ವಿಠಲನ ನೆರೆನಂಬಿ ।**

ಇಂತಹ ಸರ್ವಸಮರ್ಪಣೆ ಮಾಡುವ ಬಗ್ಗೆ ಅಧಿಕಾರಿ ಹಾಗೂ ಜೀವರ ಲಕ್ಷಣಗಳನ್ನು ಹೇಳಿದ್ದಾರೆ. ಇಂಥ ಪರಿಶುದ್ಧ ಜ್ಞಾನವಿಲ್ಲದೇ ಸರ್ವ ಕರ್ಮ ಅರ್ಪಣೆ ಮಾಡಲು ಸಾಧ್ಯವಿಲ್ಲ !

ಶ್ರೀಹರಿಯೇ ಮಾಡಿಸುವನೆಂದು **ಶ್ರೀವಿಜಯದಾಸರು** ಸಕಲಕರ್ಮಗಳ ಸಮರ್ಪಣ ಭಾವವನ್ನು ತಿಳಿಸಿದ್ದಾರೆ.

**ವಿಳಾಸ: ನಂ. 8-11-117, ಅನುಗ್ರಹ ಎನ್.ಜಿ.ಓ ಕಾಲೋನಿ, ರಾಯಚೂರು.**





ದಾಸ ಸಾಹಿತ್ಯ ಅಭಿಮಾನಿಗಳು, ಹಂಪೆಯ ಶ್ರೀಪುರಂದರದಾಸರ (ಕಟ್ಟೆಯ) ಮಂಟಪದ ಬಗ್ಗೆ ಕಾಳಜೀ ತೋರಿ, ಶ್ರಮವಹಿಸಿದವರು, ನಿವೃತ್ತ ಅಧೀಕ್ಷಕ ಅಭಿಯಂತರರಾಗಿ ಸೇವೆ ಸಲ್ಲಿಸಿರುವ **ಶ್ರೀ ಜನಾರ್ದನ ಕಟ್ಟಿಯವರ** ಲೇಖನ.

# ಭಗವದ್ಭಕ್ತಿಯ ಹರಿಕಾರರು ಶ್ರೀಪಾದರಾಜರು

ಶ್ರೀಪಾದರಾಜರು ಹರಿದಾಸ ಸಾಹಿತ್ಯದ ಹರಿಕಾರರು. ಕನ್ನಡದಲ್ಲಿ ಪದ ಪದ್ಯ ರಚಿಸಿ, ಹಾಡಿ ಕುಣಿದವರು. ಅವರ ಶಿಷ್ಯರಾದ ವ್ಯಾಸರಾಯರು, ಗುರುಗಳಿಗೆ, ನರ್ತನ ಮಾಡುತ್ತಿದ್ದ ಶ್ರೀವೇಣುಗೋಪಾಲನ ದರ್ಶನವನ್ನು ಮಾಡಿಸಿದರು. ಮಧ್ವನಾಮ ಅವರ ಕನ್ನಡದ ಸ್ತೋತ್ರ, ನಿತ್ಯಪಾರಾಯಣಕ್ಕೆ ಯೋಗ್ಯವಾದ, ಅಪೂರ್ವ ಫಲಶ್ರುತಿ ನೀಡುವ, ಮೇರು ಕೃತಿ.

ಪರಮಾತ್ಮ, ವಾಯುದೇವರು ಮತ್ತು ಇತರ ಇಂದ್ರಿಯಾಭಿಮಾನಿ ದೇವತೆಗಳಿಂದ ಕರ್ಮ ಮಾಡಿಸುತ್ತಾನೆ ! ಎಂಬುದಾಗಿ ರಾಜರು ವಿಶದ ಪಡಿಸಿದ್ದಾರೆ.

ಶ್ರೀಜಗನ್ನಾಥದಾಸರು ಶ್ರೀಹರಿಕಥಾಮೃತಸಾರದ ವ್ಯಾಪ್ತಿಸಂಧಿಯ 18ನೇ ಪದ್ಯದಲ್ಲಿ , ಇದೇ ಭಾವವನ್ನು ವ್ಯಕ್ತ ಪಡಿಸಿದ್ದಾರೆ.

**ಪವಿಹರಿನ್ಮಣಿ ವಿದ್ರುಮದ ಸ**
**ಚ್ಛವಿಗಳಂದದಿ ರಾಜಿಸುತ ಮಾ**
**ಧವ ನಿರಂತರ ದೇವಮಾನವ ದಾನವರೊಳಿದ್ದು ।**
**ತ್ರಿವಿಧ ಗುಣಕರ್ಮ ಸ್ವಭಾವವ**
**ಪವನ ಮುಖ ದೇವಾಂತರಾತ್ಮಕ**
**ದಿವಸದಿವಸದಿ ವ್ಯಕ್ತಮಾಡುತವರೊಳಿದ್ದುಣಿಪಾ ॥ (ಹ. ಸಾರ:3-18)**

ತ್ರಿವಿಧ ಜೀವರಾಶಿಗಳಲ್ಲಿ, ತ್ರಿವಿಧವಾದ ಗುಣಕರ್ಮಸ್ವಭಾವಕ್ಕನುಸಾರವಾಗಿ, ಶ್ರೀವಾಯುದೇವರ ದ್ವಾರಾ, ತತ್ವ ಪತಿ ದೇವತೆಗಳ ದ್ವಾರಾ, ನಿರಂತರದಲ್ಲಿಯೂ ಇದ್ದು ಶ್ರೀಪರಮಾತ್ಮನೇ ಮಾಡುವ ಕ್ರಿಯಾವಿಶೇಷಗಳನ್ನು ಮತ್ತು ಅವರವರ ಯೋಗ್ಯತಾನುಸಾರ ಫಲದಾತೃತ್ವ ವಿಧಾನವನ್ನು ವಿವರಿಸುತ್ತಾರೆ.

**ವಿಳಾಸ: ಪ್ಲಾಟ್ ಸಂಖ್ಯೆ 10ಇ ಎನ್.ಜಿ. ಕಾಲೋನಿ, ಶತಕೋಟಿ, ಕಲಬುರಗಿ-585102**